Swabhimani Sahakari, Monthly, Posted at GPO-MBC Bengaluru Post Office 560001, Posting Day 12th. Reg. No. RNP/BGS/2094/2011-13 Licence to post RNI No.: KARBILO 2004/18001

## ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ





ಸಾಮಾಜಿಕ ಕಾರ್ಯಕರ್ತ, ಕ್ರಿಯಾ ಶೀಲ ಸಹಕಾರಿ

### ಶ್ರೀ ಆಂಜನೇಯ ಗುಪ್ತ

ಸ್ಥಿರ ಸಮಾಜದ ಕಲ್ಪನೆ ಹೊತ್ತು 45 ವರ್ಷಗಳಿಂದ ಸಮಾಜ ಮುಖಿಯಾಗಿ ಅನನ್ಯ ಕ್ಷೇತ್ರಗಳಲ್ಲಿ ತನು, ಮನ, ಧನಗಳೊಂದಿಗೆ ಸೇವೆ ಸಲ್ಲಿಸುತ್ತಿರುವ ಶ್ರೀಯುತರು, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ರಾಮನಗರ ಜಿಲ್ಲೆಯ ಮಾಗಡಿಯ ವೈಶ್ಯ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದಿಂದ ರಾಮನಗರ ಜಿಲ್ಲಾ ಪ್ರತಿನಿಧಿಯಾಗಿ ಚುನಾಯಿತರಾಗಿರುತ್ತಾರೆ.

ಶ್ರೀಯುತರು ಮೂಲತಃ ವ್ಯಾಪಾರಿ ಕುಟುಂಬದವರಿಂದ ಬಂದವರಾಗಿದ್ದು, ದಿನಾಂಕ : 05–08–1948 ರಂದು ಶ್ರೀಯುತ ಭಾಸ್ಕರ್ ನಾಗಪ್ಪ ಶೆಟ್ಟಿ ಹಾಗೂ ಶ್ರೀಮತಿ ಶಂಕರಮ್ಮ ರವರಿಗೆ ಜನಿಸಿದ ಇವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮಾಗಡಿಯಲ್ಲಿ ಮುಗಿಸಿ, 1969ರಲ್ಲಿ ಬಿ.ಎಸ್ಸಿ. (ಟೆಕ್ಸ್‌ಟೈಲ್ಸ್) ಪದವಿಯನ್ನು ಬೆಂಗಳೂರಿನಲ್ಲಿ ಗಳಿಸಿ, ರಾಜ್ಯದಲ್ಲೇ ಹೆಚ್ಚಿನ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ. ನಂತರ ಸ್ವಕ್ಷೇತ್ರ ಮಾಗಡಿಯಲ್ಲೇ ರೇಷ್ಮೆ ಉದ್ಯಮದಲ್ಲಿ ಸಣ್ಣ ಕೈಗಾರಿಕಾ ಘಟಕದೊಂದಿಗೆ ತೊಡಗಿಸಿಕೊಂಡು ಅನೇಕರಿಗೆ ಉದ್ಯೋಗ ಕಲ್ಪಿಸಿದ್ದಾರೆ. ಮಾಗಡಿಯಲ್ಲಿ 1972ರಲ್ಲಿ ವೈಶ್ಯ ಕೋ–ಆಪರೇಟಿವ್ ಸೊಸೈಟಿಯ ಕಾರ್ಯದರ್ಶಿಯಾಗಿ ಸಹಕಾರಿ ಕ್ಷೇತ್ರಕ್ಕೆ ಬಂದು 5 ವರ್ಷಗಳ ಕಾಲ ಸೇವೆ ಸಲ್ಲಿಸಿದರು. 2006ನೇ ಇಸವಿಯಲ್ಲಿ ಇದೇ ಸಂಸ್ಥೆಯನ್ನು ಕರ್ನಾಟಕ ಸೌಹಾರ್ದ ಸಹಕಾರಿಗೆ ಪರಿವರ್ತಿಸಿ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡರು. ಸಂಸ್ಥೆಗೆ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿ, ಹೆಚ್ಚು ಲಾಭದಾಯಕವಾಗಿ ಕಾರ್ಯ ನಿರ್ವಹಿಸುವಂತೆ ಮಾಡಿದ ಕೀರ್ತಿ ಇವರದ್ದು.

ಶ್ರೀಯುತರು 1983ರಲ್ಲಿ ಶ್ರೀ ಸರಸ್ವತಿ ವಿದ್ಯಾ ಮಂದಿರ ಎಂಬ ಶಿಕ್ಷಣ ಸಂಸ್ಥೆಯನ್ನು ಮಾಗಡಿಯಲ್ಲಿ ಪ್ರಾರಂಭಿಸುವ ಮುಖಾಂತರ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದು, ಇಂದು ಶಾಲೆಯು ಗ್ರಾಮಾಂತರ ಪ್ರದೇಶದ 1780ಕ್ಕೂ ಹೆಚ್ಚು ಮಕ್ಕಳಿಗೆ ಅಕ್ಷರ ದಾಸೋಹವನ್ನು ನೀಡುತ್ತಿದೆ. ಶ್ರೀಯುತರು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಮಂಗಳ ಶಿಕ್ಷಣ ಸಮಿತಿ ಸ್ವಯಂ ಸೇವಾ ಸಂಸ್ಥೆಗೆ ಅಧ್ಯಕ್ಷರಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ. ಸಾಮಾಜಿಕ ಕಳಕಳಿಯನ್ನು ಸಹಕಾರಿ ಮನೋಭಾವವನ್ನು ರೂಢಿಸಿಕೊಂಡಿರುವ ಇವರು, ಜ್ಞಾನ ಗಂಗಾ ವಿಶ್ವಸ್ಥ ಮಂಡಳಿ ಹಾಗೂ ಸೇವಾ ಸಿಂಧು ವಿಶ್ವಸ್ಥ ಮಂಡಳಿಯ ಪ್ರಾರಂಭಿಕ ಕಾರ್ಯದರ್ಶಿಯಾಗಿ ಶಿಕ್ಷಣ, ಆರೋಗ್ಯ ಹೀಗೆ ಅನೇಕ ಸೇವಾ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಹೊಸ ಸೌಹಾರ್ದ ಸಹಕಾರಿಗಳನ್ನು ಗುರುತಿಸಿ ಸಹಕಾರಿ ಕ್ಷೇತ್ರವನ್ನು ಉತ್ತೇಜಿಸುವ ಆಶಯ ಹೊಂದಿರುವ ಇವರು ಸಂಯುಕ್ತ ಸಹಕಾರಿಯ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ.

ಸಹಕಾರದ ಮೂಲಕ ಅಭಿವೃದ್ಧಿ ಸಾಧ್ಯ

### ಶ್ರೀ ಹೆಚ್.ವಿ. ರವಿಕುಮಾರ್



ಶ್ರೀಯುತರು ಮೂಲತಃ ಶಿವಮೊಗ್ಗ ಜಿಲ್ಲೆಯ ಹೊಸಹಳ್ಳಿಯವರು. ಶ್ರೀ ಹೆಚ್.ಕೆ.ವೆಂಕಟೇಶ್, ಸಾವಿತ್ರಿಯವರ ದಂಪತಿಗೆ ದಿನಾಂಕ : 11–06–1956ರಂದು ಜನಿಸಿದರು. ಶ್ರೀಯುತರು ಮೂಲತಃ ಕೃಷಿ ಕುಟುಂಬದವರು. ಇವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಹೊಸಹಳ್ಳಿಯಲ್ಲಿ ಪೂರೈಸಿ ಪದವಿ ಶಿಕ್ಷಣವನ್ನು ಶಿವಮೊಗ್ಗದಲ್ಲಿ ಪಡೆದಿದ್ದಾರೆ. 56ರ ಹರೆಯದಲ್ಲಿ ಧರ್ಮನ್ಯಾಸ ಸೌಹಾರ್ದ ಸಹಕಾರಿಯಾ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶಿಕ್ಷಣ ನಂತರ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತನಾಗಿ ಸಾಮಾಜಿಕ ಕೆಲಸದಲ್ಲಿ ತೊಡಗಿಸಿಕೊಂಡಿದ್ದು ನಾನಾ ಜವಾಬ್ದಾರಿಗಳನ್ನು ನಿರ್ವಹಿಸಿ ವಿವಿಧ ಕ್ಷೇತ್ರವಾದ "ಸಹಕಾರ ಭಾರತಿ"ಯ ಜಿಲ್ಲಾ ಅಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಣೆ. 1994 ರಿಂದ 2010 ರವರೆಗೆ ಹೊಸಹಳ್ಳಿ ಪಂಚಾಯ್ತಿಯ ಸದಸ್ಯನಾಗಿ ಮತ್ತು 1994 ರಿಂದ 2000 ರವರೆಗೆ ಪಂಚಾಯ್ತಿಯ ಅಧ್ಯಕ್ಷನಾಗಿ ಕಾರ್ಯ ನಿರ್ವಹಣೆ. 1995 ರಿಂದ 2000 ಮತ್ತು 2008 ರಿಂದ ಇಲ್ಲಿಯವರೆಗೆ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ನೀರು ಬಳಕೆದಾರರ ಸಹಕಾರ ಸಂಘದ ಸ್ಥಾಪಕ ನಿರ್ದೇಶಕ ಮತ್ತು ಅದರ ಅಧ್ಯಕ್ಷರಾಗಿ ಕಾರ್ಯವನ್ನು ಪ್ರಗತಿಗೊಳಿಸಿ ಜಿಲ್ಲೆಯಲ್ಲಿ ಪ್ರಭಾವಿ ಮತ್ತು ಉತ್ತಮ ಸಹಕಾರ ಸಂಘವಾಗಿ ಬೆಳೆಸಿರುತ್ತಾರೆ. ಧರ್ಮನ್ಯಾಸ ಸೌಹಾರ್ದ ಪತ್ತಿನ ಸಹಕಾರಿಯ ಸ್ಥಾಪಕ ನಿರ್ದೇಶಕ ಮತ್ತು ಹಾಲಿ ಉಪಾಧ್ಯಕ್ಷರಾಗಿ ಜವಾಬ್ದಾರಿಯ ನಿರ್ವಹಣೆ ಮಾಡುತ್ತಿದ್ದಾರೆ.ಸ್ಥಳೀಯ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸ್ಥಳೀಯ ಸಾಮಾಜಿಕ ಸೇವೆಯಾದ ಗ್ರಾಮಾಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವುದು. ಗ್ರಾಮಾಭಿವೃದ್ಧಿಯಾಗಬೇಕಾದರೆ ಸ್ಥಳೀಯ ಕುಶಲ ಕರ್ಮಿಕರಿಗೆ ಸ್ಥಳೀಯ ಪ್ರತಿಭೆಗೆ ಅವಕಾಶ ಕೊಟ್ಟು ಅವರನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಪಡಿಸುವುದೇ ಶ್ರೀಯುತರ ಕಣ್ಣಮುಂದೆ ಇರುವ ಕನಸು ನನಸಾಗುವ ಕಡೆಗೆ ಪ್ರಯತ್ನ ಮಾಡುವ ಹಂಬಲ ಇದಕ್ಕೆ ಇವರ ಪತ್ನಿ ಶ್ರೀಮತಿ ರಾಜಲಕ್ಷ್ಮೀರವರ ಸಹಕಾರವೇ ಶ್ರೀ ರಕ್ಷೆ.

ಶಿವಮೊಗ್ಗ ತಾಲ್ಲೂಕಿನ ಟಿ.ಎ.ಪಿ.ಸಿ.ಎಂ.ಎಸ್. ನಲ್ಲಿ ಹತ್ತು ವರ್ಷಗಳ ಕಾಲ ನಿರ್ದೇಶಕನಾಗಿ, ಅಧ್ಯಕ್ಷರಾಗಿ ಕಾರ್ಯ ನಿರ್ವಹಣೆ ಮತ್ತು ಶಿವಮೊಗ್ಗ ಜಿಲ್ಲೆಯ ಸಹಕಾರಿ ಯೂನಿಯನ್‌ನ ಹಾಲಿ ನಿರ್ದೇಶಕರಾಗಿದ್ದಾರೆ. ಭದ್ರಾ ಕಾಡ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘದ ಒಕ್ಕೂಟದ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿ ಅದರ ಗೌರವಾಧ್ಯಕ್ಷರಾಗಿದ್ದಾರೆ. ಶಿವಮೊಗ್ಗ ತಾಲ್ಲೂಕಿನ ಎ.ಪಿ.ಎಂಸಿ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರದ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯವೆಂದು ನಂಬಿರುವ ಶ್ರೀಯುತರು ಯುವಕರು ಹಾಗೂ ಮಹಿಳೆಯರು ಹೆಚ್ಚಾಗಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಾಗ ಈ ಕ್ಷೇತ್ರ ಬಲಿಷ್ಠವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಸಹಕಾರಿ ಕ್ಷೇತ್ರದ ಜೊತೆಗೆ ಗ್ರಾಮದ ಸಾರ್ವಜನಿಕ ಅಭಿವೃದ್ಧಿ ಕೆಲಸಗಳಲ್ಲಿ ಗ್ರಾಮ ವಿಕಾಸ ಯೋಜನೆಗಳಲ್ಲಿ, ತೊಡಗಿಸಿಕೊಂಡಿರುತ್ತಾರೆ.ಗ್ರಾಮೀಣ ಅಭಿವೃದ್ಧಿಯಲ್ಲಿ ಶಿಕ್ಷಣ ಹೆಚ್ಚು ಮಹತ್ವ ನೀಡುವ ಇವರು ಮಕ್ಕಳಿಗೆ ಶಿಕ್ಷಣದ ಜೊತೆಗೆ ವಿವಿಧ ರೀತಿಯಾ ಸಹಕಾರಿ ಕ್ಷೇತ್ರದ ಮೂಲಕ ಹಮ್ಮಿಕೊಳ್ಳಬಹುದಾಗಿದೆ. ಸಹಕಾರಿಗಳು ಈ ನಿಟ್ಟಿನಲ್ಲಿ ಕಾರ್ಯಯೋಜನೆಯನ್ನು ಹಮ್ಮಿಕೊಳ್ಳಬೇಕೆಂದು ಅಪೇಕ್ಷಿಸುತ್ತಾರೆ.ಪ್ರಸ್ತುತ ಶ್ರೀಯುತರು ಶಿವಮೊಗ್ಗ ಜಿಲ್ಲೆಯಿಂದ ಸಂಯುಕ್ತ ಸಹಕಾರಿಯ ಕ್ರಿಯಾಶೀಲ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ–1. ದೂ. 0831–2401551

ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಡಿ.2, 1ನೇ ಮಹಡಿ, ರತಿ ಬಿಲ್ಡಿಂಗ್, ಖೂಬ ಪ್ಲಾಟ್, ಗುಲ್ಬರ್ಗಾ–2

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 560010.
web : www.souharda.coop, E-mail : souharada@souharada.coop

**ದೂರವಾಣಿ ಸಂಖ್ಯೆಗಳು :**
23378375/76/77/78/79/80 ಹಾಗೂ 23474408, 23573291

ಸಂಪಾದಕ, ಪ್ರಕಾಶಕ: **ಶರಣಗೌಡ ಜಿ. ಪಾಟೀಲ,**
ಸಂಚಿಕೆ ಸಿದ್ಧತೆ **ವಿ.ಜಿ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

ಅಂತರರಾಷ್ಟ್ರೀಯ
ಸಹಕಾರಿ ವರ್ಷ - 2012

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ




ನಾಡಿನ ಜನತೆಗೆ
ಶಿವರಾತ್ರಿ ಹಬ್ಬದ ಶುಭಾಶಯಗಳು


ಸಂಪುಟ 10 * ಸಂಚಿಕೆ 02 * ಫೆಬ್ರವರಿ 2012 * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/- * ಬೆಲೆ ರೂ. 5/-




ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಪ್ರಗತಿ ಪರಿಶೀಲನಾ ಹಾಗೂ ಸಮಾಲೋಚನಾ ಸಭೆ ಶ್ರೀ ಎಸ್.ಜಿ. ಹೆಗಡೆಯವರಿಂದ ಉದ್ಘಾಟನೆ. ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀಮತಿ ನಾಗರತ್ನ, ಸಂಯುಕ್ತ ಸಹಕಾರಿ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಅವರುಗಳಿದ್ದಾರೆ.

## ಒಳಪುಟಗಳಲ್ಲಿ...


ಅಧ್ಯಕ್ಷರ ನುಡಿ ........ 2
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 3,4,5
ಹಳ್ಳಿಗಳತ್ತ ಪ್ರವಾಸೋದ್ಯಮ ........ 6
ಸೂಪರ್ ಮಾರ್ಕೆಟ್ ಆರಂಭ ........ 7
ವಿವಿಧ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ........ 8,9
ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ ........ 10
ಸಂಯುಕ್ತ ಸಹಕಾರಿ ಅಧ್ಯಕ್ಷರಿಂದ ವಿವಿಧ ಸಹಕಾರಿಗಳಿಗೆ ಭೇಟಿ ........ 11
ಲೇಖನಗಳು ........ 12,13
ಸೌಹಾರ್ದ ಸಹಕಾರಿ ಸಮಾಚಾರಗಳು ........ 14
ಸುದ್ದಿ, ಷೇರು - ಚೂರು ಪಾರು ........ 15
ನಿರ್ದೇಶಕರ ಪರಿಚಯ ........ 16


ಸೌಹಾರ್ದ ಸಹಕಾರಿಗಳ ಸಂಖ್ಯೆ : 1923 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 425



# ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆಗಳು - 2012 ವಿಭಿನ್ನತೆಗೆ ಹಾಗೂ ಗುಣಾತ್ಮಕ ಕಾರ್ಯನಿರ್ವಹಣೆಗೆ ಮೊದಲ ಆದ್ಯತೆ

> "ಸೌಹಾರ್ದ ಸಹಕಾರಿಗಳ ಸಂಖ್ಯೆ ಇನ್ನು ಕೆಲವೇ ದಿನಗಳಲ್ಲಿ 2000 ತಲುಪಲಿರುವುದು ನಮ್ಮೆಲ್ಲರಿಗೆ ಜವಾಬ್ದಾರಿಯನ್ನು ಹೆಚ್ಚಿಸಿದೆ. ಸೌಹಾರ್ದ ಸಹಕಾರಿಗಳ ಗುಣಾತ್ಮಕ ಕಾರ್ಯನಿರ್ವಹಣೆಯಲ್ಲಿ ಯಾವುದೆ ರಾಜಿ ಇಲ್ಲದಂತೆ, ಆಸೆ ಆಮಿಷಗಳಿಗೆ ಬಲಿಯಾಗದೆ, ಒತ್ತಡಕ್ಕೆ ಮಣಿಯದೆ, ರಾಜಕೀಯವನ್ನು ದೂರವಿಟ್ಟು, ಶುದ್ಧ ಚಾರಿತ್ರ್ಯದಿಂದ, ನಿಷ್ಠೆಯಿಂದ ಕೆಲಸ ನಿರ್ವಹಿಸಿದಲ್ಲಿ ರಾಜ್ಯ ಸರಕಾರದ, ಸಹಕಾರಿಗಳ, ಹಾಗೂ ಸಾರ್ವಜನಿಕರ ಅಪೇಕ್ಷಗೆ ತಕ್ಕಂತೆ ಕಾರ್ಯನಿರ್ವಹಿಸಲು ಸಾಧ್ಯ."

ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆಗಳು ಇದೇ ಜನವರಿ 11 ರಂದು ಬೆಂಗಳೂರಿನಲ್ಲಿ ಬೆಂಗಳೂರು ಹಾಗೂ ಮೈಸೂರು ವಿಭಾಗದವರಿಗೂ ಮತ್ತು ಬೆಳಗಾವಿಯಲ್ಲಿ ದಿನಾಂಕ 12, 13ನೇ ಜನವರಿ 2012ರಂದು ಗುಲ್ಬರ್ಗಾ ವಿಭಾಗದವರಿಗಾಗಿ 3 ಮತ್ತು 4 ಫೆಬ್ರವರಿಯಂದು ಗುಲ್ಬರ್ಗಾ ಹಾಗೂ ಗಂಗಾವತಿಗಳಲ್ಲಿ ನಡೆದು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಗುಣಾತ್ಮಕ ಕಾರ್ಯನಿರ್ವಹಣೆಗೆ ಹಾಗೂ ಈ ಕ್ಷೇತ್ರದಲ್ಲಿ ವಿಶಿಷ್ಟ ರೀತಿಯ ಸಹಕಾರಿಗಳನ್ನು ಪ್ರಾರಂಭಿಸುವ ಬಗ್ಗೆ ಸಮಾಲೋಚನೆಗಳನ್ನು ನಡೆಸಿರುವುದು ಉತ್ತಮ ಬೆಳವಣಿಗೆ.

ಬೆಂಗಳೂರಿನ ಸಭೆಯನ್ನು ಉದ್ಘಾಟಿಸಿದ ಸಹಕಾರಿಗಳ ನಿಬಂಧಕ ಶ್ರೀ ಎಸ್.ಜಿ.ಹೆಗಡೆಯವರು ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಸಮಾಧಾನಕರ ಎಂದು ಹೇಳಿ, ತೃಪ್ತಿಕರವಾಗಿ ಕಾರ್ಯನಿರ್ವಹಿಸಲು ಕ್ರಮವಿಡಬೇಕು ಸಹಕಾರಿಗಳನ್ನು ವ್ಯವಸ್ಥಿತವಾಗಿ ಶಿಸ್ತುಬದ್ಧವಾಗಿ ನಡೆಸಬೇಕು, ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಬಾರದು; ಕಾನೂನು ನೀತಿ ನಿಯಮಗಳನ್ನು ತಿಳಿದು ಕಾರ್ಯನಿರ್ವಹಿಸಬೇಕು; ಹಳೆಯ ಕಾಯ್ದೆಯ ಸಹಕಾರಿ ಸಂಘಗಳಂತೆ ಸಾಂಪ್ರದಾಯಿವಾಗಿ ಕಾರ್ಯನಿರ್ವಹಿಸದೆ ವಿಭಿನ್ನ ರೀತಿಯಲ್ಲಿ ಹೊಸ ಹೊಸ ಕ್ಷೇತ್ರಗಳನ್ನು ಆಯ್ಕೆ ಮಾಡಿ ಕಾರ್ಯನಿರ್ವಹಿಸಲು ತಿಳಿಸಿದರು. ಅದೇ ರೀತಿ ಬೆಳಗಾವಿಯಲ್ಲಿ ಜಂಟಿ ನಿಬಂಧಕ ಶ್ರೀ ಎಮ್.ಡಿ.ಮಠಪತಿ ಹಾಗೂ ಉಪನಿಬಂಧಕ ಶ್ರೀ ಜಿ.ಎಮ್.ಪಾಟೀಲರವರು, ಗುಲ್ಬರ್ಗಾದಲ್ಲಿ ಅಣ್ಣರಾವ್ ಪಾಟೀಲ್‌ರವರು ಹಾಗೂ ಗಂಗಾವತಿಯಲ್ಲಿ ಶ್ರೀ ಸಣ್ಣಸೂಗಪ್ಪನವರು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿ ಸೌಹಾರ್ದ ಸಹಕಾರಿಗಳು ಸಾಲ ನೀಡುವಾಗ ಬಹಳ ಎಚ್ಚರಿಕೆ ವಹಿಸಬೇಕು. ದಾಖಲಾತಿ ಉತ್ತಮವಾಗಿರಬೇಕು. ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಸಹಕಾರ ಇಲಾಖೆಯು ಸಂಪೂರ್ಣವಾಗಿ ಬೆಂಬಲಿಸುತ್ತದೆ ಎಂದು ಹೇಳಿರುವುದು ನಾವೆಲ್ಲ ಗಮನಿಸಬೇಕಾದ ವಿಷಯ.

ಸಹಕಾರಿ ನಿಬಂಧಕರು ಹಾಗೂ ಇಲಾಖಾ ಅಧಿಕಾರಿಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ವಹಿಸುತ್ತಿರುವ ಆಸಕ್ತಿ ಹಾಗೂ ನೀಡುತ್ತಿರುವ ಪ್ರೋತ್ಸಾಹಕ್ಕಾಗಿ ಅಭಿನಂದನೆಗಳು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಇನ್ನು ಕೆಲವೇ ದಿನಗಳಲ್ಲಿ 2000 ತಲುಪಲಿರುವುದು ನಮ್ಮೆಲ್ಲರಿಗೆ ಜವಾಬ್ದಾರಿಯನ್ನು ಹೆಚ್ಚಿಸಿದೆ. ಸೌಹಾರ್ದ ಸಹಕಾರಿಗಳ ಗುಣಾತ್ಮಕ ಕಾರ್ಯನಿರ್ವಹಣೆಯಲ್ಲಿ ಯಾವುದೆ ರಾಜಿ ಇಲ್ಲದಂತೆ, ಆಸೆ ಆಮಿಷಗಳಿಗೆ ಬಲಿಯಾಗದೆ, ಒತ್ತಡಕ್ಕೆ ಮಣಿಯದೆ, ರಾಜಕೀಯವನ್ನು ದೂರವಿಟ್ಟು, ಶುದ್ಧ ಚಾರಿತ್ರ್ಯದಿಂದ, ನಿಷ್ಠೆಯಿಂದ ಕೆಲಸ ನಿರ್ವಹಿಸಿದಲ್ಲಿ ರಾಜ್ಯ ಸರಕಾರದ, ಸಹಕಾರಿಗಳ ಹಾಗೂ ಸಾರ್ವಜನಿಕರ ಅಪೇಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಲು ಸಾಧ್ಯ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸಭೆಯಲ್ಲಿ ಚರ್ಚಿಸಿದ ವಿಷಯಗಳಿಗೆ ಸ್ಪಂದಿಸಿ ಕಾರ್ಯೋನ್ಮುಖರಾಗಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

**ಎಸ್.ಆರ್. ಸತೀಶ್‌ಚಂದ್ರ,**
ಅಧ್ಯಕ್ಷರು.



# ಸುದ್ದಿ, ಷೇರು, ಚೂರು-ಪಾರು



## ಆರ್.ಬಿ.ಐ. ತ್ರೈಮಾಸಿಕ ಪರಾಮರ್ಶೆ; ಆರ್ಥಿಕಾಭಿವೃದ್ಧಿಗೆ ಕ್ರಮ

ಭಾರತೀಯ ರಿಸರ್ವ್ ಬ್ಯಾಂಕ್ ಸಾಲಗಳ ಬಡ್ಡಿದರ ಇಳಿಸುವ ಮತ್ತು ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡುವ ಕ್ರಮಕ್ಕೆ ಮುಂದಾಗಿದ್ದು, ಎರಡು ವರ್ಷಗಳ ಕಾಲ ಅನುಸರಿಸಿದ ಕಠಿಣ ಹಣಕಾಸು ನೀತಿಯನ್ನು ಕೈ ಬಿಟ್ಟಿದೆ. ತನ್ನ 3ನೇ ತ್ರೈಮಾಸಿಕ ಹಣಕಾಸು ನೀತಿಯ ಪರಾಮರ್ಶೆಯಲ್ಲಿ ನಿರೀಕ್ಷೆಗೆ ವ್ಯತಿರಿಕ್ತವಾಗಿ ನಗದು ಮೀಸಲು ಅನುಪಾತವನ್ನು – ಸಿ.ಆರ್.ಆರ್–ಅನ್ನು ಶೇ.0.50 ರಷ್ಟು ಇಳಿಸಿ ದೇಶದ ಬ್ಯಾಂಕಿಂಗ್ ವ್ಯವಸ್ಥೆಗೆ 32 ಸಾವಿರ ಕೋಟಿ ರೂ.ಗಳ ಮೊತ್ತ ದೊರೆಯುವಂತೆ ಮಾಡಿದೆ.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಾಣಿಜ್ಯ ಬ್ಯಾಂಕುಗಳು ತಮ್ಮಲ್ಲಿನ ಠೇವಣಿ ಮೊತ್ತದಲ್ಲಿ ಒಂದು ನಿರ್ದಿಷ್ಟ ಪಾಲನ್ನು ರಿಸರ್ವ್ ಬ್ಯಾಂಕಿನಲ್ಲಿ ಇರಿಸಬೇಕಾಗುತ್ತದೆ. ಸಿ.ಆರ್.ಆರ್. ಅಂದರೆ Cash Reserve Ratio ಶೇ. 10 ಎಂದಾದರೆ, ವಾಣಿಜ್ಯ ಬ್ಯಾಂಕುಗಳು ಒಂದು ಲಕ್ಷ ರೂ. ಠೇವಣಿಗೆ 10 ಸಾವಿರ ರೂ.ಗಳನ್ನು ರಿಸರ್ವ್ ಬ್ಯಾಂಕಿನಲ್ಲಿಡಬೇಕಾಗುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್ ವಾಣಿಜ್ಯ ಬ್ಯಾಂಕುಗಳು ತನ್ನಲ್ಲಿ ಠೇವಣಿ ಇರಿಸಿರುವ ಮೀಸಲು ಮೊತ್ತವನ್ನು ಸಿ.ಆರ್.ಆರ್. ಶೇ. 6. ರಿಂದ 5.5ಕ್ಕೆ ಇಳಿಸಿ ಅಲ್ಪಾವಧಿ ಬಡ್ಡಿ ದರದಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಲ್ಲ. ಇದರಿಂದಾಗಿ ವಿವಿಧ ಬಗೆಯ ಸಾಲ ವಿತರಿಸುವ ಬ್ಯಾಂಕುಗಳಲ್ಲಿ 32 ಸಾವಿರ ಕೋಟಿ ರೂ. ಗಳು ನಗದು ಹಣ ಲಭ್ಯವಾಗಿದೆ. ಇದು ಜನವರಿ 28 ರಿಂದಲೇ ಜಾರಿಗೆ ಬಂದಿದೆ. ಇದರಿಂದ ವಿವಿಧ ಬ್ಯಾಂಕುಗಳು ಇದನ್ನು ಮುಕ್ತ ಕಂಠದಿಂದ ಸ್ವಾಗತಿಸಿವೆ ಹಾಗೂ ಷೇರುಪೇಟೆಯೂ ಸೂಕ್ತವಾಗಿ ಸ್ಪಂದಿಸಿ ಸಂವೇದಿ ಸೂಚ್ಯಾಂಕ 244 ಅಂಕಗಳನ್ನು ದಾಖಲಿಸಿ 17 ಸಾವಿರ ಮುಟ್ಟಿತು.

ಭಾರತೀಯ ರಿಸರ್ವ್ ಬ್ಯಾಂಕಿನ ಸಿ.ಆರ್.ಆರ್. ಇಳಿಕೆಯಿಂದಾಗಿ ವಾಣಿಜ್ಯ ಬ್ಯಾಂಕುಗಳಲ್ಲಿ ಹಣದ ಲಭ್ಯತೆ ಹೆಚ್ಚಾಗಿರುವುದರಿಂದ ಅವು ಸಾಲಗಳ ಮೇಲಿನ ಬಡ್ಡಿ ದರವನ್ನು ಇಳಿಸಬಹುದಾಗಿದೆ. ಇದರಿಂದ ದೇಶದ ಆರ್ಥಿಕ ಅಭಿವೃದ್ಧಿ ದರ ಪ್ರಗತಿ ಕಾಣಲಿದೆ. ಆರ್ಥಿಕ ಬೆಳವಣಿಗೆಯ ಕುಸಿತ ತಡೆಯುವ ಹಿನ್ನೆಲೆಯಲ್ಲಿ ಹಣದುಬ್ಬರದ ನಿಯಂತ್ರಣದ ಬದಲಿಗೆ ಆರ್ಥಿಕ ಅಭಿವೃದ್ಧಿಗೆ ಈ ಕ್ರಮ ಕಾರಣವಾಗಲಿದೆ.

## ಆರ್.ಬಿ.ಐ ನಲ್ಲಿ ಸಣ್ಣ ಹಣಕಾಸು ಸಂಸ್ಥೆಗಳ ನೋಂದಣಿ ಕಡ್ಡಾಯ

ಮಾರ್ಚ್ ಎರಡನೇ ವಾರದಲ್ಲಿ ಆರಂಭವಾಗುವ ಕೇಂದ್ರದ ಬಜೆಟ್ ಅಧಿವೇಶನದಲ್ಲಿ ಹಣಕಾಸು ಸಚಿವಾಲಯ ಸಣ್ಣ ಹಣಕಾಸು ಸಂಸ್ಥೆಗಳು ತಮ್ಮ ನೋಂದಣಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಕಡ್ಡಾಯವಾಗಿ ಮಾಡಬೇಕೆನ್ನುವ ವಿಧೇಯಕವನ್ನು, ಮಂಡಿಸುವ ಸಾಧ್ಯತೆ ಇದೆ.




ಈ ಹಿನ್ನೆಲೆಯಲ್ಲಿ ಕೇಂದ್ರ ಹಣಕಾಸು ಸಚಿವಾಲಯ ವಿಧೇಯಕವನ್ನು ಅನುಮೋದನೆಗಾಗಿ ಕಾನೂನು ಸಚಿವಾಲಯಕ್ಕೆ ಕಳುಹಿಸಿಕೊಟ್ಟಿದೆ. ಕಾನೂನು ಸಚಿವಾಲಯದ ಅನುಮೋದನೆಯೊಂದಿಗೆ ಕೇಂದ್ರ ಸಂಪುಟ ಸಭೆಯ ಅನುಮೋದನೆಯೂ ದೊರೆತಲ್ಲಿ ಈ ಬಜೆಟ್ ಅಧಿವೇಶನದಲ್ಲೇ ವಿಧೇಯಕ ಮಂಡನೆಯಾಗುವ ಸಾಧ್ಯತೆಗಳಿವೆ.

ಈ ಉದ್ದೇಶಿತ ವಿಧೇಯಕದ ಕರಡಿನಲ್ಲಿ

1. ಸಣ್ಣ ಹಣಕಾಸು ಸಂಸ್ಥೆಗಳು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ನೋಂದಣಿ ಮಾಡಿಸಿಕೊಳ್ಳುವ ಮುನ್ನ ರೂ.5.00 ಲಕ್ಷ ಸ್ವಂತ ನಿಧಿಯನ್ನು ಕಡ್ಡಾಯವಾಗಿ ಸಂಗ್ರಹಿಸಿರಬೇಕು.
2. ಇದಕ್ಕೆ ಸಂಬಂಧಿಸಿದಂತೆ ನೀತಿ, ಯೋಜನೆಗಳನ್ನು ರೂಪಿಸಿ ಸರಕಾರಕ್ಕೆ ಸೂಕ್ತ ಸಲಹೆ ನೀಡುವ ಸಣ್ಣ ಹಣಕಾಸು ಅಭಿವೃದ್ಧಿ ಮಂಡಳಿ ರಚಿಸಬೇಕೆಂಬ ನಿಯಮಗಳನ್ನು.
3. ರಿಸರ್ವ್ ಬ್ಯಾಂಕಿನ ನಿರ್ದೇಶನ, ಷರತ್ತುಗಳನ್ನು ಪಾಲಿಸದ ಸಣ್ಣ ಹಣಕಾಸು ಸಂಸ್ಥೆಗಳ ನೋಂದಣಿಯನ್ನು ರದ್ದು ಮಾಡುವ ಅಧಿಕಾರವನ್ನು ಈ ಉದ್ದೇಶಿತ ಕರಡು ವಿಧೇಯಕದಲ್ಲಿ ಸೇರಿಸಲಾಗಿದೆ.

## ಷೇರುಪೇಟೆ ವಹಿವಾಟಿನಲ್ಲಿ ಪಿಂಚಣಿ ಹಣ

ಉದ್ಯೋಗಿಗಳು ನಿವೃತ್ತಿ ನಂತರ ಪಡೆಯುವ ನಿವೃತ್ತಿ ಹಣ ಮತ್ತು ಪಿಂಚಣಿ ಹಣ ನಿರೀಕ್ಷಿಸಿದ ಪ್ರಮಾಣದಲ್ಲಿ ಷೇರು ಪೇಟೆಯತ್ತ ಹರಿದು ಬರುತ್ತಿಲ್ಲ ಎನ್ನುವುದು ನಿಜ. ಈ ಹಿನ್ನೆಲೆಯಲ್ಲಿ ಉದ್ಯೋಗಿಗಳು ನಿವೃತ್ತಿ ನಂತರ ಪಡೆಯುವ ಹಣವನ್ನು ಷೇರು ವಹಿವಾಟಿನಲ್ಲಿ ತೊಡಗಿಸಲು ಉತ್ತೇಜಿಸುವಂತ ಸೂಕ್ತ ಯೋಜನೆಗಳನ್ನು ರೂಪಿಸಬೇಕಾದ ಅಗತ್ಯವಿದೆ. ಅದಕ್ಕೆ ತಕ್ಕ ಪಿಂಚಣಿ ಯೋಜನೆಗಳು ಆರಂಭಗೊಂಡರೆ, ಇಂದಿನ ಆರ್ಥಿಕ ಸಂಕಷ್ಟದ ದಿನದಲ್ಲಿ ಬಂಡವಾಳ ಹೂಡಿಕೆಗೆ ಅಪಾರ ಹಣ ಲಭ್ಯವಾಗುತ್ತದೆ. ಇದರಿಂದ ಷೇರು ಪೇಟೆಯ ಚೇತರಿಕೆಗೆ ಅಗತ್ಯ ಬಲ ದೊರಕಿದಂತಾಗುತ್ತದೆ, ಎನ್ನುವುದು 'ಸೆಬಿ'ಯ ಅಭಿಪ್ರಾಯ ಇದ್ದಂತಿದೆ.

ಈ ದಿಸೆಯಲ್ಲಿ ಹಣಕಾಸು ನಿರ್ವಹಣಾ ಸಂಸ್ಥೆಗಳು ಕಾರ್ಯಪ್ರವೃತ್ತವಾದಲ್ಲಿ ಜನ ಸಾಮಾನ್ಯ ಹೂಡಿಕೆದಾರರು ಪೇರುಪೇಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಾಗುತ್ತದೆ. ಆ ಮೂಲಕ ಷೇರು ಪೇಟೆ ಚೇತರಿಕೆ ಕಂಡರೆ, ಅಪಾರ ಸಂಖ್ಯೆಯಲ್ಲಿರು ಪಿಂಚಣಿದಾರರಿಗೆ ಹೊಸ ಆದಾಯ ಮೂಲ ಕಂಡಂತಾಗುತ್ತದೆ.






ಸ್ನೇಹಸಾಗರ ಸೌಹಾರ್ದ ಸಹಕಾರಿ ನಿ., ದಶಮಾನೋತ್ಸವದ ಸಂಭ್ರಮ ಸಮಾರಂಭದಲ್ಲಿ ವಿಧಾನಪರಿಷತ್ ಸದಸ್ಯ ಶ್ರೀ ಮನೋಹರ ಮಸ್ಕಿ, ಚಿತ್ರನಟ ರಾಮಕೃಷ್ಣ, ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶ್‌ಚಂದ್ರ ಮುಂತಾದವರು.



ಗುಲ್ಬರ್ಗಾದ ಸ್ವರ್ಣಗೌರಿ ಮಹಿಳಾ ಸೌಹಾರ್ದ ಸಹಕಾರಿ ನಿ., ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ್ ಅವರೊಂದಿಗೆ ಇತರ ಗಣ್ಯರು ಹಾಜರಿದ್ದರು.



ಮಳೆಕೋಟೆಯ ಶ್ರೀ ಅಭಯಾಂಜನೇಯಸ್ವಾಮಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ ಅಂಗನವಾಡಿ ಕೇಂದ್ರದ ಅಭಿವೃದ್ಧಿ ಕಟ್ಟಡ ಶ್ರೀ ಪುರುಷೋತ್ತಮಾನಂದ ಅವರಿಂದ ಉದ್ಘಾಟನೆ.



ಶ್ರೀ ಅಭಯಾಂಜನೇಯ ಸ್ವಾಮಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ ಅಂಗನವಾಡಿ ಮಕ್ಕಳಿಗೆ ಉಚಿತ ಶಾಲಾ ಸಮವಸ್ತ್ರ.



ಶ್ರೀ ಬಾಲಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ಅಧ್ಯಕ್ಷರಾದ ಶ್ರೀ ರಾಘವೇಂದ್ರ ಗ್ರಾಮಪುರೋಹಿತ್‌ರವರಿಗೆ ರಾಷ್ಟ್ರೀಯ ವಿಕಾಸ ಪ್ರತಿಭಾ ಪುರಸ್ಕಾರ.



ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ನಡೆದ ಸಮಾರಂಭದ ಉದ್ಘಾಟನೆ.

## ಶ್ರೀ ಆರ್.ಎಂ. ಮಂಜುನಾಥ ಗೌಡರಿಗೆ ಗೌರವ ಡಾಕ್ಟರೇಟ್



ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ಆರ್. ಎಂ. ಮಂಜುನಾಥ ಗೌಡರಿಗೆ ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪಾರ ಸೇವೆಯನ್ನು ಪರಿಗಣಿಸಿ ಕುವೆಂಪು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಪುರಸ್ಕರಿಸಿರುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು,ಆಡಳಿತ ಮಂಡಳಿಯರು ಹಾಗೂ ಸಿಬ್ಬಂದಿ ವರ್ಗದವರಿಂದ ಹೃತ್ಪೂರ್ವಕ ಅಭಿನಂದನೆಗಳು.

### ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಪ್ರಗತಿ ಪರಿಶೀಲನಾ ಹಾಗೂ ಸಮಾಲೋಚನಾ ಸಭೆಗಳು

# ಹೊಸ ಬಗೆಯ ಸಹಕಾರಿಗಳನ್ನು ಹುಟ್ಟು ಹಾಕಿ – ಶ್ರೀ ಎಸ್.ಜಿ.ಹೆಗಡೆ, ನಿಬಂಧಕ






**ಬೆಂಗಳೂರು** : ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಬೆಂಗಳೂರು ಹಾಗೂ ಮೈಸೂರು ವಿಭಾಗಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆಯನ್ನು ದಿನಾಂಕ 11/1/2012 ರಂದು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಕೆ.ಹೆಚ್.ಪಾಟೀಲ ಸ್ಮಾರಕ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.

ರಾಜ್ಯದ ಸಹಕಾರಿಗಳ ನಿಬಂಧಕರಾದ ಶ್ರೀ ಎಸ್.ಜಿ.ಹೆಗಡೆಯವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಾಧನೆ ಸಮಾಧಾನಕರವಾಗಿದೆ. ಆದರೆ ತೃಪ್ತಿಕರವಾಗಬೇಕು. ಸಂಖ್ಯೆ ಮುಖ್ಯ ಅಲ್ಲ ಗುಣಾತ್ಮಕವಾಗಿ ಬೆಳೆಯಬೇಕು ವಿಶಿಷ್ಠ ಹಾಗೂ ಹೊಸಬಗೆಯ ಸೌಹಾರ್ದ ಸಹಕಾರಿಗಳನ್ನು ಹುಟ್ಟುಹಾಕಿ ಎಂದು ಕರೆ ನೀಡಿದರು.

ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಹಕಾರ ಇಲಾಖೆಗೆ ಕಳಕಳಿ ಇದೆ ಈ ಕ್ಷೇತ್ರದ ಅಭಿವೃದ್ಧಿಗೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರರವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರ ಕ್ಷೇತ್ರ ಅನೇಕ ಹಿರಿಯರ ಪ್ರಯತ್ನದಿಂದ ಅಸ್ತಿತ್ವಕ್ಕೆ ಬಂದಿದೆ. ಈ ಕ್ಷೇತ್ರದ ಹಾಗೂ ಎಲ್ಲ ಹಿರಿಯರ ಆಶಯಕ್ಕೆ ತಕ್ಕಂತೆ ಸೌಹಾರ್ದ ಸಹಕಾರಿಗಳು ಗುಣಾತ್ಮಕವಾಗಿ ಕಾರ್ಯ ನಿರ್ವಹಿಸುವುದು ನಮ್ಮ ಪ್ರಥಮ ಕರ್ತವ್ಯ ಎಂದು ತಿಳಿಸಿ ಸಹಕಾರ ಇಲಾಖೆ ಹಾಗೂ ಸೌಹಾರ್ದ ಸಹಕಾರಿಗಳ ನಡುವೆ ಉತ್ತಮ ಬಾಂಧವ್ಯಕ್ಕಾಗಿ ಸಹಕಾರ ಇಲಾಖಾಧಿಕಾರಿಗಳ ಸಭೆಯನ್ನು ರಾಜ್ಯ ಮಟ್ಟದಲ್ಲಿ ಸಹಕಾರಿ ನಿಬಂಧಕರ ನೇತೃತ್ವದಲ್ಲಿ ವ್ಯವಸ್ಥೆಮಾಡಲು ವಿನಂತಿಸಿದರು.




ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಬೆಂಗಳೂರು ಜಿಲ್ಲಾ ನಿರ್ದೇಶಕಿ ಶ್ರೀಮತಿ ನಾಗರತ್ನ, ಕೋಲಾರ ಜಿಲ್ಲಾ ನಿರ್ದೇಶಕ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಚಾರ್ಟರ್ಟ್ ಅಕೌಂಟೆಂಟ್ ಶ್ರೀ ಮಧುಕರ ಹೆಗಡೆ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

2 ತಂಡಗಳಲ್ಲಿ ನಡೆದ ಪ್ರಗತಿ ಪರಿಶೀಲನೆ ಮತ್ತು ಸಮಾಲೋಚನೆ ಸಭೆಯಲ್ಲಿ ಬೆಳಗ್ಗೆ 117 ಹಾಗೂ ಮಧ್ಯಾಹ್ನ 108 ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಭಾಗವಹಿಸಿದ್ದರು.

**ಗುಲ್ಬರ್ಗಾ**ದಲ್ಲಿ ದಿನಾಂಕ : 3/2/2012ರಂದು **ಗಂಗಾವತಿ**ಯಲ್ಲಿ ದಿನಾಂಕ : 4/2/2012ರಂದು ಸಭೆ ನಡೆದು 61 ಹಾಗೂ 135 ಪ್ರತಿನಿಧಿಗಳು ಭಾಗವಹಿಸಿದ್ದರು. ಗುಲ್ಬರ್ಗಾದಲ್ಲಿ ಉಳಿದೆಲ್ಲ ಸಂಪನ್ಮೂಲಗಳ ಜೊತೆಗೆ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ರಾಘವೇಂದ್ರ ಪತಿಗೆ ಹಾಗೂ ಗಂಗಾವತಿಯಲ್ಲಿ ಶ್ರೀ ಸೊಪ್ಪಿನಮಠರವರು ಭಾಗವಹಿಸಿದ್ದರು.





# ಬೆಳಗಾವಿ : ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಉತ್ತಮ - ಶ್ರೀ ಜಿ.ಎಮ್.ಪಾಟೀಲ್

ದಿನಾಂಕ : 12-01-2012 ರಂದು ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಸಭೆಯನ್ನು ಬೆಳಗಾವಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ಶ್ರೀ ಜಿ.ಎಮ್.ಪಾಟೀಲ್ ಉದ್ಘಾಟಿಸಿ, ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಹಳೆಯ ಕಾಯ್ದೆಯಿಂದ ಪರಿವರ್ತನೆಗೊಂಡಿರುವ ಸಹಕಾರಿಗಳಲ್ಲಿ ಮಾತ್ರ ಕೆಲವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿಲ್ಲ ಕೆಲವು ಲೋಪದೋಷಗಳಾಗುತ್ತಿವೆ ಅವುಗಳ ಕಾರ್ಯ ನಿರ್ವಹಣೆಯ ಬಗ್ಗೆ ಸಂಯುಕ್ತ ಸಹಕಾರಿಯು ಹೆಚ್ಚು ಮುತುವರ್ಜಿವಹಿಸಲು ತಿಳಿಸುತ್ತ ಸಾಲ ನೀಡಿಕೆ ಮಾಡುವಾಗ ದಾಖಲಾತಿಗಳ ನಿರ್ವಹಣೆ ಒಳ್ಳೆಯದಾಗಿರಬೇಕು ಇಲ್ಲದಿದ್ದರೆ ವಸೂಲಾತಿಗೆ ತೊಂದರೆಯಾಗುತ್ತದೆ ಸಂಯುಕ್ತ ಸಹಕಾರಿಯವರು ಆಡಳಿತಾತ್ಮಕ ಲೆಕ್ಕ ಪರಿಶೋಧನೆ ಮಾಡುತ್ತಿರುವುದು ಸ್ವಾಗತಾರ್ಹ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಬೆಳಗಾವಿ ಜಿಲ್ಲೆಯ ನಿರ್ದೇಶಕ ಹಿರಿಯ ಸಹಕಾರಿ ಶ್ರೀ ರಾವಸಾಹೇಬ ಪಾಟೀಲರವರು ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರ ಅಭಿವೃದ್ಧಿಯಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಪಾತ್ರ ಅತ್ಯಂತ ಮಹತ್ವದ್ದು. ನಿಷ್ಠೆ ಹಾಗೂ ದಕ್ಷತೆಯಿಂದ ಮತ್ತು ಸದಸ್ಯರ ವಿಶ್ವಾಸ ಗಳಿಸಿ ಉಳಿಸಿಕೊಂಡು ಕಾರ್ಯ ನಿರ್ವಹಿಸಲು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಪಾಂಡುರಂಗ ಸಿಂಪಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ, ಬೆಳಗಾವಿ ವಿಭಾಗೀಯ ಅಧಿಕಾರಿ ಶ್ರೀ ಜಿ.ಎಸ್.ಟೋಪಣ್ಣವರ ಮುಂತಾದ ಅಧಿಕಾರಿಗಳು ಭಾಗವಹಿಸಿದ್ದರು. ಬೆಳಗ್ಗೆ ನಡೆದ ಸಭೆಯಲ್ಲಿ 102 ಮಧ್ಯಾಹ್ನದ ಸಭೆಯಲ್ಲಿ 97 ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿದ್ದರು.









# ಸಮಾಜದ ಕನಿಷ್ಠ ವ್ಯಕ್ತಿಗೆ ಸಹಕಾರಿ ಕ್ಷೇತ್ರದ ಸೇವೆ ದೊರಕಬೇಕು - ಎಮ್.ಡಿ. ಮಠಪತಿ

ದಿನಾಂಕ 13/1/2012 ರಂದು ನಡೆದ ಸಭೆಯನ್ನು ಬೆಳಗಾವಿ ವಿಭಾಗದ ಜಂಟಿ ನಿಬಂಧಕ ಶ್ರೀ ಎಮ್.ಡಿ.ಮಠಪತಿಯವರು ಉದ್ಘಾಟಿಸಿ ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿಯೆ ಸಹಕಾರ ಕ್ಷೇತ್ರದ ಗುರಿ. ಆದ್ದರಿಂದ ಸಮಾಜದ ಪ್ರತಿಯೊಬ್ಬರಿಗೂ ಈ ಕ್ಷೇತ್ರದ ಸೇವೆ ದೊರಕುವಂತಾಗಬೇಕು. ಈ ನಿಟ್ಟಿನಲ್ಲಿ ಮುಖ್ಯ ಕಾರ್ಯನಿರ್ವಹಣಧಿಕಾರಿಗಳು ಕಾರ್ಯನಿರ್ವಹಿಸಬೇಕು. ಹೊಸ ಹೊಸ ಯೋಜನೆಗಳನ್ನು ಜಾರಿ ಮಾಡಬೇಕು. ವಿಶಿಷ್ಠ ಬಗೆಯ ಕಾರ್ಯಗಳನ್ನು ನಿರ್ವಹಿಸಬೇಕು. ಬದಲಾವಣೆಗಳಿಗೆ ಸ್ಪಂಧಿಸಬೇಕು, ಸಹಕಾರ ಇಲಾಖೆಯು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ವಾಗುವ ಎಲ್ಲ ನೆರವು ನೀಡುತ್ತದೆ ಎಂದು ತಿಳಿಸಿ ಸಹಕಾರಿಗಳಿಗೆ ಈ ಕಾಯ್ದೆಯಡಿಯಲ್ಲಿ ಹೆಚ್ಚಿನ ಸ್ವಾಯತ್ತತೆ ನೀಡಲಾಗಿದೆ. ಅದನ್ನು ಉಪಯೋಗಿಸಿಕೊಂಡು ಉತ್ತಮ ಅಭಿವೃದ್ಧಿಯನ್ನು ಸಾಧಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಳಗಾವಿ ಜಿಲ್ಲೆಯ ಯುವ ಸಹಕಾರಿ ಶ್ರೀ ಶ್ರೀಕಾಂತ ಹತನುರೆ ವಹಿಸಿದ್ದರು. ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಪಾಂಡುರಂಗ ಸಿಂಪಿ, ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು. ಬೆಳಗಿನ ಸಭೆಯಲ್ಲಿ 133, ಮಧ್ಯಾಹ್ನದ ಸಭೆಯಲ್ಲಿ 99 ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಭಾಗವಹಿಸಿದ್ದರು.

6 ತಂಡಗಳಲ್ಲಿ ನಡೆಸಿದ ಈ ಸಭೆಗಳಲ್ಲಿ ಒಟ್ಟಾರೆ 656 ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಭಾಗವಹಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಾತ್ಮಕ ಕಾರ್ಯನಿರ್ವಹಣೆಯಲ್ಲಿ ಅನುಸರಿಸಬಹುದಾದ ಕಾರ್ಯಯೋಜನೆ ಗಳ ಬಗ್ಗೆ ಚರ್ಚಿಸಲಾಯಿತು.







ಎಚ್. ಶಿವಕುಮಾರ್
ಚಾರ್ಟೆಡ್ ಅಕೌಂಟೆಂಟ್
shivakumar.h@icai.org

# ಸಂಪೂರ್ಣ ಸ್ವಾಯತ್ತತೆಯತ್ತ ಸಹಕಾರಿ ಸಂಘಗಳು

ಕಳೆದ ಸಂಚಿಕೆಯಲ್ಲಿ ಸಹಕಾರಿ ಸಂಸ್ಥೆಗಳು ಕಾರ್ಪೋರೇಟ್ ವಲಯದೊಂದಿಗೆ ಪೈಪೋಟಿಗೆ ಇಳಿಯಬೇಕಾದ ಅವಶ್ಯಕತೆಯಿದೆ ಎಂಬ ಅಭಿಪ್ರಾಯದ ಪ್ರಸ್ತಾಪವಾಗಿತ್ತು. ಕನ್ನಡ ಸಾಹಿತ್ಯ ಸಮ್ಮೇಳನದ ಗೋಷ್ಠಿಯೊಂದರಲ್ಲಿ ಮೂಡಿ ಬಂದ ಇಂತಹ ಅಭಿಪ್ರಾಯದ ಬೆನ್ನ ಹಿಂದೆಯೇ ಮಹತ್ವದ ಕಾನೂನು ತಿದ್ದುಪಡಿಯೊಂದು ಹೊರ ಬಂದಿದೆ. ಸಂವಿಧಾನಕ್ಕೆ ತಂದಿರುವ 111ನೇ ತಿದ್ದುಪಡಿಯು ಸಂಪೂರ್ಣವಾಗಿ ಸಹಕಾರಿ ವಲಯಕ್ಕೆ ಮೀಸಲಾಗಿದೆ. ಈ ತಿದ್ದುಪಡಿಯ ಮೂಲಕ 242ZI ಎಂಬ ಕಲಮಿನ ಪ್ರಕಾರ ರಾಜ್ಯ ಸರ್ಕಾರಗಳು ಸಹಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ ಕಾನೂನನ್ನು ಸಮಗ್ರವಾಗಿ ಬದಲಾಯಿಸುವ ಅಧಿಕಾರ ಹೊಂದಿವೆ. ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವುದು, ನಿಯಂತ್ರಿಸುವುದು ಮತ್ತು ಸ್ಥಗಿತಗೊಳಿಸುವ ಪ್ರಕ್ರಿಯೆಯನ್ನು ಆಮೂಲಾಗ್ರವಾಗಿ ಪ್ರಜಾಸತ್ತಾತ್ಮಕ ತತ್ವಗಳಿಗನುಗುಣವಾಗಿ ಸ್ವಾಯತ್ತ ಸಂಸ್ಥೆಗಳಂತೆ ಸರ್ಕಾರದ ತೀವ್ರ ಕಟ್ಟುನಿಟ್ಟುಗಳಿಲ್ಲದೆ ನಡೆಸುವಂತಹ ಸಂಪೂರ್ಣ ಸೌಹಾರ್ದಕಾರಿ ವಾತಾವರಣವನ್ನು ತರಲು ಈ ಸಂವಿಧಾನಾತ್ಮಕ ತಿದ್ದುಪಡಿ ಆಸ್ಪದ ಕೊಡಲಿದೆ.

ಇಲ್ಲಿಯವರೆಗೆ ರಾಜ್ಯ ಸರ್ಕಾರದ ಸಹಕಾರ ಇಲಾಖೆಯ ನೇರ ನಿಯಂತ್ರಣದಲ್ಲಿದ್ದು ಕೆಲಸಮಾಡುತ್ತಿದ್ದ ಸಹಕಾರಿ ಸಂಘ ಸಂಸ್ಥೆಗಳು ಇನ್ನು ಮುಂದೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಅವಕಾಶ ಹೊಂದುತ್ತವೆ. ಸರ್ಕಾರದ ಅಧಿಕಾರಿಶಾಹಿಯ ಎದುರು "ಕೋಲ ತುದೀಯ ಕೋಡಗನಂತೆ" ಕುಣಿಯುತ್ತಾ ಕಾರ್ಯ ನಿರ್ವಹಿಸುತ್ತಿದ್ದ ಸಹಕಾರಿ ಸಂಘಗಳು ಇನ್ನು ಮುಂದೆ ಕಾರ್ಪೋರೇಟ್ ವಲಯದ ಕಂಪನಿಗಳಂತೆ ಸ್ವತಂತ್ರವಾಗುವ ಅವಕಾಶ ಬಂದೊದಗಿದೆ. ಅನಗತ್ಯ ಸರ್ಕಾರಿ ಹಸ್ತಕ್ಷೇಪವನ್ನು ಹತ್ತಿಕ್ಕಲು ಮತ್ತು ವೃತ್ತಿಪರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಈ ನಿರ್ಧಾರಕ್ಕೆ ಬಂದಿರುವುದಾಗಿ ಸಂವಿಧಾನದ ತಿದ್ದುಪಡಿಯ ಉದ್ದೇಶ ಮತ್ತು ಸಕಾರಣ ಹೇಳಿಕೆಯೊಂದು ಸಮರ್ಥನೆ ಮಾಡಿಕೊಳ್ಳುತ್ತದೆ. ಸಂವಿಧಾನದ 111ನೇ ತಿದ್ದುಪಡಿಯನ್ನು ಕೇಂದ್ರ ಸಚಿವ ಶರದ್ ಪವಾರ್ ಸಂಸತ್ತಿನಲ್ಲಿ ಮಂಡಿಸಿದ್ದು ಕಳೆದ ನವೆಂಬರ್ ತಿಂಗಳಿನಿಂದ ಜಾರಿಯಾಗುವಂತೆ ತಿದ್ದುಪಡಿಯು ಅನುಮೋದನೆ ಪಡೆದುಕೊಂಡಿದೆ.

ಸದರಿ ತಿದ್ದುಪಡಿಯ ಪರಿಣಾಮವಾಗಿ ಸಹಕಾರಿ ಸಂಘ ಸಂಸ್ಥೆಗಳು ಈ ಕೆಳಕಂಡ ಅಧಿಕಾರ ಮತ್ತು ಅವಕಾಶಗಳನ್ನು ಹೊಂದಿರುತ್ತದೆ.



1. ಸಹಕಾರಿ ಸಂಘ ಸಂಸ್ಥೆಗಳಲ್ಲಿ ಸಂಪೂರ್ಣ ಪ್ರಜಾಸತ್ತಾತ್ಮಕ ಮತ್ತು ಸ್ವಯಂ ನಿಯಂತ್ರಣ ಆಧಾರಿತ ಆಡಳಿತ ವೈಖರಿ.
2. ಆಡಳಿತ ಮಂಡಳಿ ನಿರ್ದೇಶಕರ ಸಂಖ್ಯೆ ಗರಿಷ್ಟ 21.
3. ಆಡಳಿತ ಮಂಡಳಿಯ ಅವಧಿ 5 ವರ್ಷಗಳು.
4. ಆಡಳಿತ ಮಂಡಳಿಯನ್ನು ಅಮಾನತ್ತಿನಲ್ಲಿಡಲು ಗರಿಷ್ಟ ಆರು ತಿಂಗಳ ಅವಧಿ. ಆರು ತಿಂಗಳಿಗೂ ಮೇಲ್ಪಟ್ಟ ಅಮಾನತ್ತಿನಲ್ಲಿಡಲು ಅವಕಾಶವಿಲ್ಲ.
5. ಸಹಕಾರಿಗಳ ಲೆಕ್ಕಪರಿಶೋಧನೆ ವೃತ್ತಿಪರರಿಂದ. ಇಲಾಖೆಯು ಇಲ್ಲಿಯವರೆಗೆ ನಡೆಸುತ್ತಿದ್ದ ಲೆಕ್ಕಪರಿ ಶೋಧನೆಗೆ ಇನ್ನು ಮುಂದೆ ಅವಕಾಶವಿಲ್ಲ.
6. ಮಾಹಿತಿ ಹಕ್ಕು ಕಾಯಿದೆಯನ್ವಯ ಎಲ್ಲಾ ಸದಸ್ಯರಿಗೂ ಸೂಕ್ತ ಮಾಹಿತಿಯನ್ನು ಒದಗಿಸುವುದು.
7. ಕಾಲಕಾಲಕ್ಕೆ ಸಹಕಾರಿ ಸಂಸ್ಥೆಗಳಿಂದ ಮಾಹಿತಿ ಮತ್ತು ಅಂಕಿ ಅಂಶಗಳನ್ನು ತರಿಸಿಕೊಳ್ಳಲು ರಾಜ್ಯ ಸರ್ಕಾರಗಳಿಗೆ ಪರಮಾಧಿಕಾರ.
8. ತಪ್ಪಿತಸ್ಥ ಸಹಕಾರಿ ಸಂಸ್ಥೆಗಳಿಗೆ ಶಿಕ್ಷೆ ವಿಧಿಸಲು, ದಂಡ ಹಾಕಲು ರಾಜ್ಯ ಸರ್ಕಾರಕ್ಕೂ ಅಧಿಕಾರ.

ಕೇಂದ್ರ ಸರ್ಕಾರವು ತಂದಿರುವ ಈ ತಿದ್ದುಪಡಿಯು ಮೇಲ್ನೋಟಕ್ಕೆ ಕಾರ್ಪೋರೇಟ್ ವಲಯಕ್ಕೆ ಸಂಬಂಧಿಸಿದ ಕಂಪನಿ ಕಾನೂನಿನ ರೂಪರೇಶೆಗಳಂತೆ ತೋರುತ್ತದೆ. ಹೇಗೆ ಕಂಪನಿ ಕಾಯಿದೆಯ ಮೂಲಕ ಖಾಸಗಿ ಕಂಪನಿಗಳನ್ನು ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯವು ನಿಯಂತ್ರಿಸುತ್ತಿದೆಯೋ ಅದೇ ಮಾದರಿಯಲ್ಲಿ ರಾಜ್ಯ ಸರ್ಕಾರಗಳು ತಮ್ಮ ರಾಜ್ಯದ ವ್ಯಾಪ್ತಿಯಲ್ಲಿರುವ ಸಹಕಾರ ಸಂಸ್ಥೆಗಳನ್ನು ನಿಯಂತ್ರಿಸಬೇಕಾದ ಪರಿಸ್ಥಿತಿ ಸೃಷ್ಟಿಯಾಗಲು ಇದರಿಂದ ಸಾಧ್ಯವಾಗಿದೆ.

ಸಹಕಾರಿ ಸಂಘ ಸಂಸ್ಥೆಗಳು ಕಾರ್ಪೋರೇಟ್ ವಲಯದ ಕಂಪನಿಗಳಂತೆ ಕಾರ್ಯ ನಿರ್ವಹಿಸಿ ಅವುಗಳೊಂದಿಗೆ ಪೈಪೋಟಿಗೆ ಇಳಿದಲ್ಲಿ ಮಾತ್ರ ಸಹಕಾರ ಸಂಘಟನೆಯ ಉಳಿವು ಸಾಧ್ಯ ಎಂಬ ಪರಿಣಾಮಕಾರಿ ಅಭಿಪ್ರಾಯ ಮಂಡನೆಯಾದ ಹಿನ್ನಲೆಯಲ್ಲಿ ಬಂದಿರುವ ಇಂತಹ ತಿದ್ದುಪಡಿಯನ್ನು ಸಹಕಾರಿ ವಲಯ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗಿದೆ.


2009ರ ನವೆಂಬರ್‌ನಲ್ಲಿ 107ನೇ ಕ್ರಮ ಸಂಖ್ಯೆಯ ಮಸೂದೆಯಾಗಿ ಲೋಕಸಭೆಯಲ್ಲಿ ಮಂಡನೆಯಾಗಿದ್ದು, ಈ ತಿದ್ದುಪಡಿಯು ಈಗ 2011ನೇ ಡಿಸೆಂಬರ್‌ನಲ್ಲಿ ಅಧಿಕೃತವಾಗಿ ಅನುಮೋದನೆಯಾಗಿದೆ. ಸದರಿ ತಿದ್ದುಪಡಿಯ ಸಮಗ್ರ ಅಧ್ಯಯನ ಮತ್ತು ಅನುಕೂಲ, ಪ್ರತಿಕೂಲಗಳ ವಿವರವಾದ ವಿಶ್ಲೇಷಣೆಯನ್ನು ಸಹಕಾರಿ ಕ್ಷೇತ್ರ ಎದುರು ನೋಡುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಮುಂದಿನ ದಿನಗಳು ರಾಜ್ಯ ಸರ್ಕಾರ ಮತ್ತು ಸಹಕಾರಿ ಇಲಾಖೆ ತೆಗೆದುಕೊಳ್ಳುವ ಅಧಿಕೃತ ನಿರ್ಣಯಗಳು ಬಹಳ ಮುಖ್ಯ ಮತ್ತು ಮಹತ್ವದ್ದಾಗಿವೆ. ಈ ನಿಟ್ಟಿನಲ್ಲಿ ಅತ್ಯಂತ ವಿವೇಚನಕಾರಿ ಮತ್ತು ಜವಾಬ್ದಾರಿಯುತ ಕಾನೂನು ಕಟ್ಟಳೆಗಳನ್ನು ರಚಿಸುವ ಗುರುತರವಾದ ಹೊಣೆ ರಾಜ್ಯ ಸರ್ಕಾರದ ಮೇಲಿದೆ. ಕಾದು ನೋಡೋಣ.

## ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಸೌಹಾರ್ದ ಸಹಕಾರಿಗಳಿಗೆ ಸದಸ್ಯತ್ವ ಭರವಸೆ : ಅಭಿನಂದನಾ ಸಮಾರಂಭದಲ್ಲಿ ಶ್ರೀ ಅಣ್ಣಾರಾವ್ ಪಾಟೀಲ್




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನೇತೃತ್ವದಲ್ಲಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿಯ ಚಳುವಳಿ ಪ್ರಗತಿ ಸಾಧಿಸುತ್ತಿರುವುದು ಅತ್ಯಂತ ಸಂತೋಷದ ವಿಷಯ. ರಾಜ್ಯದ ಸಹಕಾರ ಚಳುವಳಿಗೆ ಒಂದು ರೀತಿಯ ಬಲವನ್ನು ತಂದುಕೊಟ್ಟಿರುವ ಈ ಸೌಹಾರ್ದ ಸಹಕಾರಿ ಚಳುವಳಿ ಇನ್ನೂ ಹೆಚ್ಚು ಸಂಖ್ಯಾತ್ಮಕ ಹಾಗೂ ಗುಣಾತ್ಮಕವಾಗಿ ಬೆಳೆಯಲಿ ಎಂದು ದಿನಾಂಕ : 03-02-2012ರಂದು ಗುಲ್ಬರ್ಗಾ ನಗರದ ಗುಡ್-ಲಕ್ ಹೋಟೆಲ್‌ನಲ್ಲಿ ನಡೆದ ಸೌಹಾರ್ದ ಸಹಕಾರಿಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಸಭೆಯಲ್ಲಿ ಹಾರೈಸಿದ ಗುಲಬರ್ಗಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯದ 'ಸಹಕಾರಿ ರತ್ನ' ಪ್ರಶಸ್ತಿ ಪುರಸ್ಕೃತ ಶ್ರೀ ಅಣ್ಣಾರಾವ್ ಪಾಟೀಲ್‌ರವರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಸದಸ್ಯತ್ವ ನೀಡುವುದಾಗಿ ತಿಳಿಸಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಹಾಗೂ ಗುಲಬರ್ಗಾ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ ರವರು ಶ್ರೀ ಅಣ್ಣಾರಾವ್ ಪಾಟೀಲ್ ರವರನ್ನು ಶಾಲು ಹೊದಿಸಿ ಫಲ ತಾಂಬೂಲ ನೀಡಿ ಅಭಿನಂದನೆ ಸಲ್ಲಿಸಿದರು.

# ಸಹಕಾರಿ ನಿಬಂಧಕರು ನಿರ್ವಹಿಸುವ ಕಾರ್ಯಗಳು



ಸಿ.ಎನ್. ಪರಶಿವಮೂರ್ತಿ
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು

(ಹಿಂದಿನ ಸಂಚಿಕೆಯಿಂದ)

...ಸಹಕಾರ ಚಳುವಳಿ ಬೆಳವಣಿಗೆ ಅದರಲ್ಲೂ ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಸಕ್ರಿಯ ಪಾತ್ರ ವಹಿಸಬೇಕು.

ಸದಸ್ಯ ಸಹಕಾರಿಗಳು ಸಂಯುಕ್ತ ಸಹಕಾರಿಗಳ ಜೊತೆ ಸತತ ಸಂಪರ್ಕ ಇರಬೇಕು. ಹಾಗೂ ಮಾಹಿತಿ ವಿನಿಮಯ ಆಗಬೇಕು. ಅದರಲ್ಲೂ ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಗಳು ತಮ್ಮ ಕಾರ್ಯ ಚಟುವಟಿಕೆಗಳ ಬಗ್ಗೆ, ಮಾಹೆಯಾನ, ತ್ರೈಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕ ಲೆಕ್ಕಪತ್ರಗಳು ಮತ್ತು ವಹಿವಾಟಿನ ಮಾಹಿತಿ ಸಲ್ಲಿಸಬೇಕು. ವ್ಯವಹರಣೆಯಲ್ಲಿ ತೊಡಕು/ತೊಂದರೆ ಬಂದಾಗ, ಸಂಯುಕ್ತ ಸಹಕಾರಿಯ ಮಾರ್ಗದರ್ಶನ ನೀಡಬೇಕು. ಇದರ ಜೊತೆಗೆ ಸದಸ್ಯ ಸಹಕಾರಿಗಳು ಒಕ್ಕೂಟ ಸಹಕಾರಿ ಹುಟ್ಟುಹಾಕಲು ಮತ್ತು ಅಂತಹ ಸಂಸ್ಥೆಗಳಿಂದ ಸದಸ್ಯ ಸಹಕಾರಿಗಳಿಗೆ ವ್ಯವಹಾರಿಕವಾಗಿ ಮಾರ್ಗದರ್ಶನ ನೀಡಲು ಕ್ರಮವಿಡುವುದು. ಸಂಯುಕ್ತ ಸಹಕಾರಿಯ ಕರ್ತವ್ಯವೆಂದು ತಿಳಿಯಬೇಕು. ಸದಸ್ಯ ಸಹಕಾರಿಗಳ ವ್ಯಾವಹಾರಿಕ, ಹಣಕಾಸು, ಆಡಳಿತ ವಿಷಯದಲ್ಲಿ ಸುತ್ತೋಲೆ, ಮಾರ್ಗದರ್ಶನದ ಮುಖಾಂತರ ಆಗಿಂದಾಗ್ಗೆ ಸೂತ್ರಗಳನ್ನು ರೂಪಿಸಿಕೊಡಬೇಕು.

**(6) ಸದಸ್ಯ ಸಹಕಾರಿಗಳ ಮಂಡಳಿ ಸಭೆಗೆ ಮಾರ್ಗದರ್ಶನ ಮತ್ತು ವ್ಯವಸ್ಥಾಪನೆ ಬಗ್ಗೆ :**



ಸಂಯುಕ್ತ ಸಹಕಾರಿಯ ನಿರ್ದೇಶಕನಾಗಿ ಬರುವ ವ್ಯಕ್ತಿ ಒಂದು ಪ್ರಾಥಮಿಕ ಮತ್ತು ಒಕ್ಕೂಟ ಸಹಕಾರಿಯಿಂದ ಆಯ್ಕೆಯಾಗಿ ಬರುತ್ತಾನೆ. ಸಂಯುಕ್ತ ಸಹಕಾರಿ ನಿರ್ದೇಶಕನಾದ ನಂತರ ಅವನ ಕಾರ್ಯವ್ಯಾಪ್ತಿಯಲ್ಲಿ (ಸಂಬಂಧಪಟ್ಟ ಜಿಲ್ಲೆಯಲ್ಲಿ) ಸಹಕಾರಿಗಳು ಸಹಕಾರಿ ತತ್ವಗಳೂ ಮತ್ತು ಗುಣಮಟ್ಟ ಆರ್ಥಿಕ ಸೇವೆ ಕಲ್ಪಿಸುತ್ತಿವೆಯೇ ಎಂಬುದರ ಬಗ್ಗೆ ಗಮನ ಹರಿಸಬೇಕು. ಸದಸ್ಯ ತೊಡಗಿಸಿಕೊಂಡಿವೆಯೇ, ಸದಸ್ಯರ ಆರ್ಥಿಕ ಬೆಳವಣಿಗೆಗೆ ಗಮನಹರಿಸಿದೆಯೇ, ಎಂಬುದರ ಬಗ್ಗೆ ಸದಸ್ಯ ಸಹಕಾರಿಗಳು ನಡೆಸುವ ಸಭೆ/ಸಮಾರಂಭಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಬೇಕು. ಆದರೆ ಈ ರೀತಿ ಮಾರ್ಗದರ್ಶನ ಒಂದು ನಿರ್ದೇಶನವೆಂದು ಭಾವಿಸಲಾರದಂತೆ ಗಮನವಹಿಸಬೇಕು. ಸದಸ್ಯ ಸಹಕಾರಿ ಒಂದು ಸ್ವಾಯತ್ತ, ಸ್ವತಂತ್ರ ಸಂಸ್ಥೆಯಾಗಿರುವುದರಿಂದ, ಸಂಯುಕ್ತ ಸಹಕಾರಿ ನಿಯಂತ್ರಿಸಲು ಪ್ರಯತ್ನಿಸುತ್ತಿದೆ ಎಂಬ ಭಾವನೆ ಬರಬಾರದು. ಆದರೆ ಸದಸ್ಯ ಸಹಕಾರಿಗಳು ಸನ್ಮಾರ್ಗ ಬಿಟ್ಟು ಹೋಗುವ ಸಂದರ್ಭದಲ್ಲಿ, ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನಿಗೆ ರವಾನಿಸಬೇಕು. ಆದರೆ ಈ ವರದಿ ಯಾವುದೇ ಕಾರಣಕ್ಕೂ ತನಿಖಾ ವರದಿರೂಪದಲ್ಲಿರಬಾರದು. ಅಂದರೆ ನ್ಯೂನತೆ ಸಾಬೀತಾಗಿದೆ. ಎಂಬ ಭಾವನೆಯಿಂದ ವರದಿ ಸಲ್ಲಿಸತಕ್ಕದ್ದಲ್ಲ. ಏಕೆಂದರೆ ಸಂಬಂಧಪಟ್ಟ ಸಹಕಾರಿ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲಿಸುವ ಮೊದಲೇ, ತಪ್ಪು ಮಾಡಲಾಗಿದೆ ಎಂಬ ಭಾವನೆ ಇರಬಾರದು. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಚರ್ಚಿಸಿ, ಸದಸ್ಯ ಸಹಕಾರಿಯ ಮೇಲೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಅಂತಿಮಗೊಳಿಸಿ, ಸಂಯುಕ್ತ ಸಹಕಾರಿ ಮುಖ್ಯ ಕಾರ್ಯನಿರ್ವಾಹಕನ ಮೂಲಕ ಕ್ರಮವಿಡಬೇಕು.

ಸಂಯುಕ್ತ ಸಹಕಾರಿ ಒಂದು ಮಂಡಳಿಯಾಗಿ ಅಧಿಕಾರ ಹೊಂದಿದೆಯೇ ಹೊರತು, ಪ್ರತಿ ನಿರ್ದೇಶಕನಿಗೆ ಯಾವುದೇ ಅಧಿಕಾರ ಇಲ್ಲ ಎಂಬುದನ್ನು ಸಂಯುಕ್ತ ಸಹಕಾರಿ ನಿರ್ದೇಶಕರು ಗಮನದಲ್ಲಿರಿಸಿಕೊಳ್ಳಬೇಕು. ಶಕ್ತಿ ಇರುವುದು ಮಂಡಳಿಗೆ ಮತ್ತು ಆ ಶಕ್ತಿಯನ್ನು ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನ ಮೂಲಕ ಚಲಾಯಿಸಬೇಕು. ಸಂಯುಕ್ತ ಸಹಕಾರಿ ನಿರ್ದೇಶಕರು ತಮ್ಮ ವೈಯಕ್ತಿಕ ವರ್ಚಸ್ಸು ಬೆಳೆಸಿಕೊಳ್ಳಲು ಸದಸ್ಯ ಸಹಕಾರಿಗಳನ್ನು ಬಳಸಿಕೊಳ್ಳಬಾರದು ಅಥವಾ ಯಾವುದೇ ಸದಸ್ಯ ಸಹಕಾರಿಗೆ ತೊಡಕುಂಟಾಗುವಂತೆ ಕಾರ್ಯ ನಿರ್ವಹಿಸತಕ್ಕದ್ದಲ್ಲ.

**(7) ಸದಸ್ಯ ಸಹಕಾರಿಗಳಿಗೆ ನೀತಿ ಸಂಹಿತೆ ರೂಪಿಸುವುದು:**

(1) ಸಹಕಾರಿ ತತ್ವಗಳನ್ನು ಓದಿ ತಿಳಿದುಕೊಳ್ಳುವುದು.

(2) ಸಹಕಾರಿಯ ಉಪನಿಯಮಗಳನ್ನು ಒಪ್ಪಿಕೊಂಡು ಅನುಷ್ಠಾನಗೊಳಿಸುವುದು.

(3) ಆಡಳಿತ ಮಂಡಳಿಗೆ ನಿರ್ದಿಷ್ಟಪಡಿಸಿರುವ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

(4) ಸಂಯುಕ್ತ ಸಹಕಾರಿ ನೀಡಿದ ಸುತ್ತೋಲೆ, ನಿರ್ದೇಶನ ಮತ್ತಿತರ ಶಾಸನಬದ್ಧ ಸೂಚನೆಗಳನ್ನು ಅನುಷ್ಠಾನಗೊಳಿಸುವುದು.

(5) ಸಹಕಾರಿಯ ಧ್ಯೇಯೋದ್ದೇಶಗಳನ್ನು ಜಾರಿ ಮಾಡಲು ಕ್ರಮ ಜರುಗಿಸುವುದು.

(6) ಸಹಕಾರಿಯ ಸದಸ್ಯರ ಅಗತ್ಯಗಳನ್ನು, ಅಹವಾಲುಗಳನ್ನು ಮತ್ತು ತೊಡಕುಗಳನ್ನು ಪರಿಹರಿಸಲು ಆಡಳಿತ ಮಂಡಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು.

(7) ಸಹಕಾರ ಆಂದೋಲನಕ್ಕೆ ವಿರುದ್ಧವಾಗಿ ಯಾವುದೇ ನೀತಿ ನಿಯಮಗಳನ್ನು ರೂಪಿಸಬಾರದು.

(8) ಪ್ರತಿ ಆಡಳಿತ ಮಂಡಳಿ ಮತ್ತು ಮಹಾಸಭೆಗಳಲ್ಲಿ ಹಾಜರಾಗಿ, ಭಾಗವಹಿಸಿ ಸಕ್ರಿಯ ಸಲಹೆ ಸೂಚನೆಗಳನ್ನು ಕೊಡುವುದು.

(9) ಮತ್ತೊಬ್ಬ ನಿರ್ದೇಶಕನ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದು

(10) ಆಡಳಿತ ಮಂಡಳಿಯ ಬಹುಮತದ ತೀರ್ಮಾನಕ್ಕೆ ತಲೆಬಾಗುವುದು.

(11) ಆಡಳಿತ ಮಂಡಳಿ ಮತ್ತು ಮಹಸಭೆಗಳಲ್ಲಿ ಹಾಜರಾಗಿ, ಭಾಗವಹಿಸಿ ಸಕ್ರಿಯ ಸಲಹೆ ಸೂಚನೆಗಳನ್ನು ಕೊಡುವುದು.

(12) ಆಡಳಿತ ಮಂಡಳಿ ತೆಗೆದುಕೊಂಡ ತೀರ್ಮಾನಗಳು ಕಾರ್ಯರೂಪಕ್ಕೆ ಬಂದಿದೆಯೇ ಎಂಬುದನ್ನು ಪರಿಶೀಲಿಸುವುದು.

(13) ಸಹಕಾರಿ ಸದಸ್ಯರ ಆರ್ಥಿಕ ಬೆಳವಣಿಗೆಗಾಗಿ ಹೊಸ ಯೋಜನೆಗಳನ್ನು ರೂಪಿಸಲು ಆಡಳಿತ ಮಂಡಳಿಗೆ ಸಲಹೆ ನೀಡುವುದು.

(14) ಸಹಕಾರಿಯ ಕಾರ್ಯನೀತಿ ಜಾರಿ ಮಾಡಲು ಪಾರದರ್ಶಕತೆ ಅನುಸರಿಸುವುದು ಅಂದರೆ ಖರೀದಿ, ಮಾರಾಟ ಮತ್ತು ಸಂಸ್ಕರಣೆಗೆ ಸಂಬಂಧಪಟ್ಟಂತೆ.

(15) ನೌಕರರು ಅವರಿಗೆ ವಹಿಸಿದ ಕೆಲಸ ನಿರ್ವಹಿಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸುಬುದು – ಆಡಳಿತ ಮಂಡಳಿಯ ಮುಖಾಂತರ–ಆದರೆ ವೈಯಕ್ತಿಕವಾಗಿ ಯಾವುದೇ ನೌಕರನಿಗೆ ನಿರ್ದೇಶನ ನೀಡತಕ್ಕದಲ್ಲ.

(16) ಇನ್ನಿತರ ನಿರ್ದೇಶಕರು/ನೌಕರರ ಮೇಲೆ ಯಾವುದೇ ಪ್ರಭಾವ ಬೀರತಕ್ಕದ್ದಲ್ಲ.

(17) ಸಹಕಾರಿಯು ಸಂಬಂಧಿಕರನ್ನು ನೌಕರರನ್ನಾಗಿ ಸೇರಿಸಲು ಪ್ರಯತ್ನಿಸಬಾರದು.

(18) ಸಹಕಾರಿ ಮಾಡುವ ವ್ಯವಹಾರವನ್ನು ಖಾಸಗಿಯಾಗಿ ಮಾಡುತ್ತಿರಬಾರದು.\

(19) ಇನ್ನಿತರ ಪದಾಧಿಕಾರಿಗಳನ್ನು ನಿರ್ದೇಶಕರನ್ನು, ಸದಸ್ಯರನ್ನು ಮತ್ತು ನೌಕರರನ್ನು ಗೌರವದಿಂದ ಕಾಣಬೇಕು.

(20) ಆಡಳಿತ ಮಂಡಳಿಯಲ್ಲಿ ಚರ್ಚೆಗೆ ಬಂದ ವಿಷಯಗಳಲ್ಲಿ ವೈಯಕ್ತಿಕ ಆಸಕ್ತಿ ವಿಷಯವಿದ್ದರೆ ಭಾಗವಹಿಸಬಾರದು ಮತ್ತು ಯಾವುದೇ ನೌಕರನ ಪರವಾಗಿ ವಾದಿಸಬಾರದು.

(21) ಆಡಳಿತ ಮಂಡಳಿ ಸಭೇಯಲ್ಲಿ ನಡೆಯುವ ಚರ್ಚೆ, ವಿಮರ್ಶೆ, ಅಭಿಪ್ರಾಯಗಳ ಬಗ್ಗೆ ಗೌಪ್ಯತೆ ಕಪಾಡುವುದು ಮತ್ತು ಮಂಡಳಿಯ ಸದಸ್ಯರ ಜೊತೆ ಮಾತ್ರ ಚರ್ಚಿಸಬೇಕು.

(22) ಸಹಕಸರಿಯ ನಿರ್ದೇಶಕನಾಗಿರುವ ತನದ, ಸಹಕಾರಿಯ ಕೀರ್ತಿಗೆ ಚ್ಯುತಿ ಬರದಂತೆ ಕಾರ್ಯನಿರ್ವಹಣೆ ನಡೆಸಬೇಕು ಮತ್ತು ಸಾರ್ವಜನಿಕರಲ್ಲಿ ಸಹಕಾರಿಯ ಬಗ್ಗೆ ತಪ್ಪು ಅಭಿಪ್ರಾಯ ಬರದಂತೆ ನಿರ್ದೇಶಕನು ಕಾರ್ಯ ನಿರ್ವಹಿಸಬೇಕು.

(23) ಸಹಕಾರಿಯ ಆಸ್ತಿಗಳನ್ನು ಸ್ವಾರ್ಥಕ್ಕೆ ಅಥವಾ ಸ್ವಾರ್ಥ ಸಾಧನೆಗೆ ಉಪಯೋಗಿಸಬಾರದು.

■

ಸ್ವಾಭಿಮಾನಿ ಸಹಕಾರಿ

# ಇ-ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗೆ ತರಬೇತಿ : ದೇಶದ ಸಹಕಾರ ಕ್ಷೇತ್ರದಲ್ಲಿ ಇ-ಸ್ಟಾಂಪಿಂಗ್ ವ್ಯವಹಾರ ಪ್ರಾರಂಭಿಸಿದ ಕೀರ್ತಿ ಸೌಹಾರ್ದ ಸಹಕಾರಿಗಳಿಗೆ – ರವಿಕುಮಾರ್



ಬೆಂಗಳೂರು : ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ನಡೆಸುತ್ತಿರುವ ಇ-ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಯವರಿಗಾಗಿ ದಿನಾಂಕ 9,10 ಜನವರಿ 2012 ರಂದು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಕೆ.ಹೆಚ್.ಪಾಟೀಲ್ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಸ್ಟಾಕ ಹೊಲ್ಡಿಂಗ ಕಂಪನಿಯ ವಿಭಾಗೀಯ ಅಧಿಕಾರಿ ರವಿಕುಮಾರ

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಮೂಲಕ ಇ-ಸ್ಟಾಂಪಿಂಗ್ ವ್ಯವಹಾರವನ್ನು ಜಾರಿಗೆ ಪ್ರಾರಂಭಿಸಲು ಸಂಯುಕ್ತ ಸಹಕಾರಿಯ ಪದಾಧಿಕಾರಿಗಳ ಶ್ರಮ ಶ್ಲಾಘನೀಯ ಎಂದು ತಿಳಿಸಿ ದೇಶದ ಸಹಕಾರ ಕ್ಷೇತ್ರದಲ್ಲಿ ಇ-ಸ್ಟಾಂಪಿಂಗ್ ವ್ಯವಹಾರ ಪ್ರಾರಂಭಿಸಿದ ಕೀರ್ತಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಲ್ಲುತ್ತದೆ. ರಾಜ್ಯದಲ್ಲಿ ಇ-ಸ್ಟಾಂಪಿಂಗ್ ಕೇಂದ್ರಗಳನ್ನು ನಡೆಸುವುದರಲ್ಲಿಯೂ ಸೌಹಾರ್ದ ಸಹಕಾರಿಗಳೇ ಮುಂಚೂಣಿಯಲ್ಲಿದ್ದಾರೆ.

ಈ ಕಾರ್ಯನಿರ್ವಹಣೆಯ ಬಗ್ಗೆ ಸಿಬ್ಬಂದಿಯವರು ಪೂರ್ಣ ಮಾಹಿತಿ ಹೊಂದಿರುವುದು ಅಗತ್ಯ. ಆದ್ದರಿಂದ ಸಂಯುಕ್ತ ಸಹಕಾರಿಯು ಈ ತರಬೇತಿಯನ್ನು ವ್ಯವಸ್ಥೆ ಮಾಡಿರುವುದು ಸೂಕ್ತವಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಮಾತನಾಡಿ ರಾಜ್ಯದಲ್ಲಿ ಒಟ್ಟಾರೆ 900 ಕೇಂದ್ರಗಳಲ್ಲಿ 423 ಕೇಂದ್ರಗಳು ಸೌಹಾರ್ದ ಸಹಕಾರಿಗಳು ನಡೆಸುತ್ತಿದ್ದಾರೆ. ರಾಜ್ಯದ ಬೊಕ್ಕಸಕ್ಕೆ ಪ್ರತಿದಿನ ರೂ. 1.25 ಕೋಟಿಯಷ್ಟು ಹಣ ಈ ಕ್ಷೇತ್ರದ ಮೂಲಕ ಸಂದಾಯವಾಗುತ್ತಿದೆ.

ಈ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರು ಸಾರ್ವಜನಿಕರೊಡನೆ ವ್ಯವಹಾರ ಮಾಡುತ್ತಿರುವುದರಿಂದ ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ. ಯಾವುದೆ ಒಂದು ಕೇಂದ್ರದಲ್ಲಿ ಲೋಪ ದೋಷಗಳಾದರೆ ಇಡೀ ಸೌಹಾರ್ದ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತದೆ. ಹೀಗಾಗಿ ಪ್ರತಿ ವರ್ಷವೂ ಈ ಕೇಂದ್ರದ ಸಿಬ್ಬಂದಿಯವರಿಗೆ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

## ಸೌಹಾರ್ದ ಸಹಕಾರಿಯ ಘನತೆ ಹೆಚ್ಚಿಸಿ : ಗುರುನಾಥ ಜ್ಯಾಂತೀಕರಿಂದ ಸಿಬ್ಬಂಧಿಗಳಿಗೆ ಕಿವಿಮಾತು

ದಿನಾಂಕ : 10-1-2012ರಂದು ನಡೆದ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರರವರು ಉದ್ಘಾಟಿಸಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಇ-ಸ್ಟಾಂಪಿಂಗ್ ತರುವುದರಲ್ಲಿ ಸಂಯುಕ್ತ ಸಹಕಾರಿಯ ಪದಾಧಿಕಾರಿಗಳು ಆಡಳಿತ ಮಂಡಳಿಯವರು ಸರಕಾರದ ಹಂತದಲ್ಲಿ, ಸ್ಟಾಕ್ ಹೊಲ್ಡಿಂಗ್ ಕಾರ್ಪೋರೇಷನ್ ಹಂತದಲ್ಲಿ ಅನೇಕ ವಿರೋಧಗಳ ನಡುವೆಯೂ ತುಂಬ ಪ್ರಯತ್ನ ಮಾಡಿದ್ದಾರೆ. ಇದರಿಂದಾಗಿ ಈ ಕ್ಷೇತ್ರಕ್ಕೆ ಮಾನ್ಯತೆ ದೊರಕಿದಂತಾಗಿದೆ. ಸೌಹಾರ್ದ ಸಹಕಾರಿಗಳ ಅಸ್ತಿತ್ವ ಸಾರ್ವಜನಿಕರಿಗೆ ತಿಳಿಯುವಂತಾಗಿದೆ ಎಂದರು.

ಅಲ್ಲದೇ ಈ ವ್ಯವಹಾರವನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗದಿದ್ದಲ್ಲಿ ಇಡೀ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುವ ಸಾಧ್ಯತೆ ಇದೆ. ಈ ಕ್ಷೇತ್ರದ



ಕಾರ್ಯಚಟುವಟಿಕೆಗಳನ್ನು ಜನರು ಹಾಗೂ ಸರಕಾರ ಬಹಳ ಆಸಕ್ತಿಯಿಂದ ನೋಡುತ್ತಿದ್ದಾರೆ. ಅವರೆಲ್ಲರ ನಿರೀಕ್ಷೆ ಸುಳ್ಳಾಗದಂತೆ ಈ ಕ್ಷೇತ್ರದ ಘನತೆಯನ್ನು ಕಾಪಾಡುವುದು ಸಿಬ್ಬಂದಿಯ ಕರ್ತವ್ಯ ಎಂದು ತಿಳಿಸಿದರು.

ಎರಡು ದಿನಗಳಲ್ಲಿ 4 ತಂಡಗಳಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ 345 ಕೇಂದ್ರಗಳ ಸಿಬ್ಬಂದಿಯವರು ಭಾಗವಹಿಸಿ ತರಬೇತಿ ಪಡೆದರು. ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ವಿಭಾಗೀಯ ಅಧಿಕಾರಿ ಶ್ರೀ ರವಿಕುಮಾರ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆ ಹಾಗೂ ಇ-ಸ್ಟಾಂಪಿಂಗ್ ವಿಭಾಗದ ಮುಖ್ಯಸ್ಥೆ ಶ್ರೀಮತಿ ಕೃತಿ ಜನಾರ್ಧನರವರು ತರಬೇತಿ ನೀಡುವುದರ ಜೊತೆಗೆ ಸಿಬ್ಬಂದಿಯವರೊಂದಿಗೆ ಪ್ರಶ್ನೋತ್ತರ ಕಾರ್ಯಕ್ರಮವನ್ನು ನಡೆಸಿದರು.

# ಹಳ್ಳಿಗಳತ್ತ ಪ್ರವಾಸೋದ್ಯಮ

## ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಹುಳಗೋಳದಲ್ಲಿ ಸ್ಪೈಸ್ ರೂಟ್ ಸೌಹಾರ್ದ ಸಹಕಾರಿಯ ವಿನೂತನ ಯಶಸ್ವಿ ಪ್ರಯೋಗ

ಸೂಚನೆ : ರಾಜ್ಯದ ಸೌಹಾರ್ದ ಸಹಕಾರಿಗಳು ಈ ಎರಡೂ ಸಂಸ್ಥೆಗಳಿಗೆ ಭೇಟಿ ನೀಡಿ, ಅಧ್ಯಯನಮಾಡಿ ತಮ್ಮ ವ್ಯಾಪ್ತಿಯಲ್ಲಿ ಈ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸ್ಫೂರ್ತಿ ಪಡೆಯ ಬಹುದಾಗಿರುತ್ತದೆ.

ಭಾರತ ಸಂಪದ್ಭರಿತ ದೇಶ. ಶತಶತಮಾನಗಳಿಂದಲೂ ಈ ದೇಶವನ್ನಾಳಿದವರು ಸಂಪತ್ತನ್ನು ಕೊಳ್ಳೆ ಹೊಡೆದರೂ ನಮ್ಮ ದೇಶ ಬಡವಾಗಲಿಲ್ಲ. ಸ್ವಾಭಾವಿಕ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಂಡು ದೇಶದ ಯುವಜನರಿಗೆ ಕೆಲಸ ಕೊಟ್ಟು ದುಡಿಯುವ ಅವಕಾಶ ಒದಗಿಸಿದಲ್ಲಿ ಏನನ್ನಾದರೂ ಸಾಧಿಸಬಹುದು. ಸಹಕಾರ ಕ್ಷೇತ್ರದ ಮೂಲಕ ಇಂತಹ ಅನೇಕ ಪ್ರಯೋಗಗಳಾಗಿವೆ. ಸಹಕಾರ ಕ್ಷೇತ್ರ ದೇಶದ ಜನರಿಗೆ ಉದ್ಯೋಗ ಒದಗಿಸುವುದರ ಜೊತೆಗೆ ಅವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಇದೇ ಉದ್ದೇಶ ಹೊಂದಿರುವ ಉತ್ತರ ಕನ್ನಡ ಜಿಲ್ಲೆಯ ಹುಳಗೋಳ ಕೆಲವು ಸಹಕಾರಿಗಳು ಪ್ರವಾಸೋದ್ಯಮವನ್ನು ಗ್ರಾಮದತ್ತ ಕೊಂಡೊಯ್ಯುವ ಹೊಸ ಯೋಚನೆಯನ್ನು ಮಾಡಿ ಯಶಸ್ವಿಯಾಗಿರುವುದೇ ಸ್ಪೈಸ್ ರೂಟ್ ಸೌಹಾರ್ದ ಸಹಕಾರಿಯ ಸ್ಥಾಪನೆಗೆ ಕಾರಣ.



ಸಂಸದ ಶ್ರೀ ಅನಂತ ಕುಮಾರ್ ಹೆಗಡೆಯಿಂದ ಅತಿಥಿ ಗೃಹ ಉದ್ಘಾಟನೆ

### ಉದ್ದೇಶಗಳು



ಗ್ರಾಮದಲ್ಲಿ ಹಾಲಿಯಿರುವ ಸರಕಾರ ಹಾಗೂ ಸಾರ್ವಜನಿಕರು ಗುರುತಿಸಿರದ ಸೃಷ್ಟಿ ಸೌಂದರ್ಯಗಳನ್ನು ಪ್ರವಾಸಿ ತಾಣಗಳನ್ನಾಗಿ ಪರಿವರ್ತಿಸುವುದು. ಜೊತೆಗೆ ಭಾರತೀಯ ಸಂಸ್ಕೃತಿ, ಕಲೆ ಹಬ್ಬ ಹರಿದಿನಗಳ, ಜಾತ್ರೆಗಳ ಆಚಾರ ವಿಚಾರಗಳನ್ನು ಪಟ್ಟಿಮಾಡಿ ಪ್ರವಾಸಿಗರಿಗೆ ಪರಿಚಯಿಸುವುದರ ಮೂಲಕ ಗ್ರಾಮಮಟ್ಟದಲ್ಲಿ ಪ್ರವಾಸೋದ್ಯಮವನ್ನು ವಿಸ್ತರಿಸುವುದು ಗ್ರಾಮದ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಹರಿಕಾರನಂತೆ ಕಾರ್ಯ ನಿರ್ವಹಿಸುವುದು ಈ ಸಹಕಾರಿಯ ಮುಖ್ಯ ಉದ್ದೇಶ. ಸಹಕಾರಿಯ ಉದ್ದೇಶ ಸಾಧನೆಗಾಗಿ ಯುರೋಪ್ ದೇಶದ ಒಂದು ಪ್ರವಾಸಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಹಾಗೆಯೇ ಸ್ವದೇಶಿ ಪ್ರವಾಸಿ ಸಂಸ್ಥೆಗಳನ್ನೂ ಸಂಪರ್ಕದಲ್ಲಿಟ್ಟುಕೊಂಡಿದೆ. ಒಟ್ಟಾರೆ ವರ್ಷವಿಡೀ ಪ್ರವಾಸಿಗಳು ಈ ಸಹಕಾರಿಗೆ ಭೇಟಿ ನೀಡುವ ವ್ಯವಸ್ಥೆಯನ್ನು ಮಾಡುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಿಂದ 10 ಕಿ.ಮೀ. ದೂರದಲ್ಲಿರುವ ಹುಲಗೋಳ ವ್ಯವಸಾಯ ಪ್ರಧಾನ ಗ್ರಾಮ. ವರ್ಷದ ಪೂರ್ತಿ ವ್ಯವಸಾಯ ಕೆಲಸವಿಲ್ಲ. ವ್ಯವಸಾಯ ಕೆಲಸಕ್ಕಾಗಿ ಹಳ್ಳಿ ಬಿಟ್ಟು ಪಟ್ಟಣಕ್ಕೆ ಹೋಗುವಂತಿಲ್ಲ. ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿರು




ಪಶ್ಚಿಮ ಘಟ್ಟದಲ್ಲಿ ಸುಸ್ಥಿರ ಪ್ರವಾಸೋದ್ಯಮ ಸವಾಲುಗಳು, ಸಾಧ್ಯತೆಗಳು ಕುರಿತ ಕಾರ್ಯಾಗಾರದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ರವರೊಂದಿಗೆ ಇತರ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಗ್ರಾಮದ ಯುವಕರಿಗೆ ಆಸರೆಯಾಗಿಯಾಗಿ ನಿಲ್ಲುವಂತೆ ಈ ಹೊಸ ಯೋಜನೆಯನ್ನು ಹುಟ್ಟುಹಾಕಿದವರು ಚಾರ್ಟರ್ಡ್ ಅಕೌಂಟೆಂಟ್ ವೃತ್ತಿಯಲ್ಲಿರುವ ಪ್ರಗತಿಪರ ಚಿಂತಕ ಶ್ರೀ ಸುಬ್ರಮಣ್ಯ ಗಣಪತಿ ಹೆಗಡೆ ನೇತೃತ್ವದ ತಂಡ. ದಿನಾಂಕ : 04–02–2010ರಲ್ಲಿ ಸಹಕಾರಿಯ ನೊಂದಣೆ. ರೂ. 25,000 ಪಾವತಿಯಾದ ಶೇರು ಬಂಡವಾಳವಿದೆ. ಈ ಸಹಕಾರಿಯಲ್ಲಿ 46 ಸದಸ್ಯರಿದ್ದಾರೆ. ಸದಸ್ಯರಿಂದ ಚುನಾಯಿತರಾದ ಆಡಳಿತ ಮಂಡಳಿಯಿದೆ.

ಶ್ರೀ ಸುಬ್ರಹ್ಮಣ್ಯ ಗಣಪತಿ ಹೆಗಡೆಯವರು ಈ ಸಹಕಾರಿಯ ಅಧ್ಯಕ್ಷರು. ಸ್ವತಃ ಕೃಷಿಕರು, ಚಾರ್ಟರ್ಡ್ ಅಕೌಂಟೆಂಟ್ ವೃತ್ತಿ. ಜಿಲ್ಲೆಯ ಹಿರಿಯ ಅನುಭವಿ ಸಹಕಾರಿಗಳ ಬೆಂಬಲ ಹಾಗೂ ಪ್ರೋತ್ಸಾಹದಿಂದ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. 2010ರ ಪ್ರಾರಂಭದ ಸಾಲಿನಲ್ಲಿ ರೂ. 4864 ಹಾಗೂ 2011ರಲ್ಲಿ 9713 ರೂ.ಗಳ ಲಾಭಗಳಿಸಿದೆ.

### ಕಾರ್ಯವಿಧಾನ :

1. **ವಸತಿ ವ್ಯವಸ್ಥೆ :** ಈ ಸಹಕಾರಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಉಳಿದುಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. (ಗೆಸ್ಟ್ ಹೌಸ್) ಇದಕ್ಕೆ ಪ್ರವಾಸಿಗರಿಂದ ಬಾಡಿಗೆ ಪಡೆಯಲಾಗುತ್ತಿದೆ.
2. **ಊಟ ಉಪಹಾರಗಳ ವ್ಯವಸ್ಥೆ :** ದೇಶಿ ಊಟದ ವ್ಯವಸ್ಥೆಯಿದೆ. ಪ್ರತಿ ದಿನ ಬೇರೆ ಬೇರೆ ರುಚಿಯ ಅಡಿಗೆಮಾಡಿ ಬಡಿಸುತ್ತಾರೆ. ಅಡಿಗೆ ಮಾಡುವುದಕ್ಕಾಗಿ ಸದಸ್ಯರಲ್ಲಿಯೆ 8 ಜನ ಹೆಣ್ಣು ಮಕ್ಕಳ ಆಹಾರ ಸಮಿತಿ (ತಂಡ) ರಚಿಸಲಾಗಿದೆ. ಈ ಹೆಣ್ಣುಮಕ್ಕಳಿಗೆ ಪ್ರತಿದಿನ 2 ಗಂಟೆಯ ಕೆಲಸ. ಅಡಿಗೆ ಮಾಡಿಟ್ಟು ಹೋಗಲಿಕ್ಕೆ ಪ್ರತಿದಿನಕ್ಕೆ ರೂ 150/– ಪಾವತಿಸಲಾಗುತ್ತದೆ. ಇವರು ಸರದಿಯಂತೆ ಕಾರ್ಯನಿರ್ವಹಿಸುತ್ತಾರೆ. ಜೊತೆಗೆ ಪ್ರವಾಸಿಗರು ಸ್ವಸಂತೋಷದಿಂದ ನೀಡುವ ಟಿಪ್ಸನ್ನು ಒಟ್ಟುಗೂಡಿಸಿ ಎಲ್ಲರಿಗೂ ಸಮನಾಗಿ ವಿತರಿಸಲಾಗುತ್ತದೆ.
3. **ಗೈಡ್ ವ್ಯವಸ್ಥೆ:** (ಮಾರ್ಗದರ್ಶಿ) ಪ್ರವಾಸಿಗರಿಗೆ ಸ್ಥಳೀಯ ವಿವರಗಳನ್ನು ತಿಳಿಸಿ ಕೊಡುವುದಕ್ಕಾಗಿ ಗೈಡ್ ವ್ಯವಸ್ಥೆಯಿದೆ. ಸುಶಿಕ್ಷತ ಯುವಕರಿಗೆ ಗೈಡ್‌ಮಾಡುವುದಕ್ಕಾಗಿ 6 ಜನರಿಗೆ ತರಬೇತಿ ನೀಡಲಾಗಿದೆ. ಈ ಮಾರ್ಗದರ್ಶಿಗಳಿಗೆ ಪ್ರತಿ ದಿನಕ್ಕೆ ರೂ 300/–ರಂತೆ ಸಂಭಾವನೆ ಪಾವತಿಸಲಾಗುತ್ತದೆ. ಸಂಭಾವನೆ ಜೊತೆಗೆ ಪ್ರವಾಸಿಗರು ಪಾವತಿಸುವ ಟಿಪ್ಸ್‌ಗಳನ್ನು ಒಟ್ಟುಗೂಡಿಸಿ ಎಲ್ಲರಿಗೂ ಸಮನಾಗಿ ವಿತರಿಸಲಾಗುತ್ತದೆ.



4. **ಅರಣ್ಯ ನಡಿಗೆ (ಫಾರೆಸ್ಟ್ ವಾಕ್) ಗ್ರಾಮ ಪರಿಸರ ಅಧ್ಯಯನ:** ಸಹಕಾರಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಅರಣ್ಯದಲ್ಲಿ ನಡಿಗೆ ವ್ಯವಸ್ಥೆ ಮಾಡಲಾಗುತ್ತದೆ. ಹೀಗೆ ನಡೆಯುವಾಗ ಪ್ರವಾಸಿಗರಿಗೆ ಗ್ರಾಮ ಜೀವನ ಶೈಲಿ, ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಕೋಳಿಸಾಕಾಣಿಕೆ, ಕುರಿ ಸಾಕಾಣಿಕೆ, ಒಳನಾಡು ಮೀನುಗಾರಿಕೆ ವಿಧಾನ, ಆಹಾರ ಬೆಳೆಗಳು, ವಾಣಿಜ್ಯ ಬೇಳೆಗಳು, ಗ್ರಾಮದ ಕೈಕಸಬುಗಳು, ಗ್ರಾಮ ಕೈಗಾರಿಕೆಗಳು, ಜಾನಪದ ಸಾಹಿತ್ಯ, ಸಂಗೀತ ಇತ್ಯಾದಿ ವೈವಿಧ್ಯಗಳನ್ನು ಪರಿಚಯಿಸುವುದು.

5 ಪ್ರವಾಸಿಗರು ಗ್ರಾಮೀಣ ವೈವಿಧ್ಯಮಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ವ್ಯವಸ್ಥೆಮಾಡಲಾಗುತ್ತದೆ. ಇದೊಂದು ಜೀವಮಾನದ ಅತ್ಯಂತ ಖುಷಿ ನೀಡಿದ ಪ್ರವಾಸ ಎಂದು ಪ್ರವಾಸಿಗರು ಅಭಿಪ್ರಾಯವಾಗಿದೆ.

## ಸಂಭ್ರಮದ ಗಣರಾಜ್ಯೋತ್ಸವ



ಬೆಳಗಾವಿಯ ಸಂಯುಕ್ತ ಸಹಕಾರಿಯ ವಿಭಾಗೀಯ ಕಚೇರಿಯಲ್ಲಿ ಗಣರಾಜ್ಯೋತ್ಸವ. ಸಂಸದ ಶ್ರೀ ಸುರೇಶ್ ಅಂಗಡಿಯವರಿಂದ ಧ್ವಜಾರೋಹಣ.



ಸೌಹಾರ್ದ ಸಹಕಾರಿ ಕಚೇರಿಯಲ್ಲಿ ಸಿಬ್ಬಂಧಿಗಳಿಂದ ಸಂಭ್ರಮದಿಂದ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

## ಸಂಯುಕ್ತ ಸಹಕಾರಿ ಅಧ್ಯಕ್ಷರಿಂದ ವಿವಿಧ ಸಹಕಾರಿಗಳಿಗೆ ಭೇಟಿ



ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿ



ಸ್ವರ್ಣಗೌರಿ ಸೌಹಾರ್ದ ಸಹಕಾರಿ, ಬೆಳಗಾವಿ.



ಭ್ರಮರಾಂಭ ಸೌಹಾರ್ದ ಸಹಕಾರಿ, ಮಸ್ಕಿ.



ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಸಹಕಾರಿ, ಕಾರಟಗಿ.




ನಿವೇದಿತ ಸೌಹಾರ್ದ ಸಹಕಾರಿ, ಗುಲ್ಬರ್ಗಾ.



ಗುಲ್ಬರ್ಗಾದಲ್ಲಿ ಪತ್ರಿಕಾಗೋಷ್ಠಿ

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ




**ಶ್ರೀಕಾಂತ ಬರುವೆ**
ಕಾನೂನು ವಿಭಾಗ ಸಂಯುಕ್ತ ಸಹಕಾರಿ

**ಅಶ್ವತ್ಥಪುರ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು.**

● ಸಹ ಸದಸ್ಯರನ್ನಾಗಿ ಯಾರನ್ನು ಸೇರಿಸಿಕೊಳ್ಳಬಹುದು? ಮತ್ತು ಸಹ ಸದಸ್ಯರ ಹಕ್ಕು ಬಾಧ್ಯತೆಗಳೇನು?

ಉತ್ತರ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಕಲಂ 21ಎ(1)(ಬಿ)ರನ್ವಯ ಉಪ ವಿಧಿಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶ ಮತ್ತು ಅವಧಿಗಾಗಿ ಯಾವುದೇ ವ್ಯಕ್ತಿ, ಫರ್ಮು, ಕಂಪನಿ, ನಿಕಾಯ, ಸಹಕಾರಿ ಅಥವಾ ಸಂಘವನ್ನು ಸಹ ಸದಸ್ಯನಾಗಿ ಸೇರಿಸಿಕೊಳ್ಳಬಹುದು.

ಕಾಯ್ದೆ ಕಲಂ 2(ಆರ್)ರಲ್ಲಿ 'ಸದಸ್ಯ' ಎಂದರೆ ಸಹ ಸದಸ್ಯನನ್ನು ಒಳಗೊಂಡಿರತಕ್ಕದ್ದು ಎಂದು ಹೇಳಲಾಗಿದೆ. ಅದರಂತೆ ಕಾಯ್ದೆ ಕಲಂ 20ರಲ್ಲಿ ಯಾರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು ಮತ್ತು ಮುಂದುವರಿಸಬಹುದು ಎಂದು ಹೇಳಲಾಗಿದೆ. ಕಾಯ್ದೆ ಕಲಂ 21ಎ(1)(ಬಿ)ರನ್ವಯ ಉಪ ವಿಧಿಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶ ಮತ್ತು ಅವಧಿಗಾಗಿ ಯಾವುದೇ ವ್ಯಕ್ತಿಯನ್ನು ಸಹ ಸದಸ್ಯನೆಂದು ಸೇರಿಸಿಕೊಳ್ಳಬಹುದೆಂದು ತಿಳಿಸಿದ್ದರೂ ಸಹ, ಸದಸ್ಯನ್ನಾಗಿ ಸೇರಿಸಿಕೊಳ್ಳಬಹುದಾದ ವ್ಯಕ್ತಿಯು ಕಾಯ್ದೆ ಕಲಂ 20ರಲ್ಲಿ ತಿಳಿಸಿರುವ ಅರ್ಹತೆಯನ್ನು ಹೊಂದಿರುವುದು ಕಡ್ಡಾಯ.

ಮೇಲಿನ ವ್ಯಾಖ್ಯೆಯನ್ವಯ ವ್ಯಕ್ತಿಯನ್ನು ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳುವ ಕುರಿತಂತೆ ಕಾಯ್ದೆ ಕಲಂ 20ರಲ್ಲಿ ನೀಡಿರುವ ವ್ಯಾಖ್ಯಾನವನ್ನು ಗಮನಿಸುವುದು ಸೂಕ್ತ, ಕಾಯ್ದೆ ಕಲಂ 20(1)ರನ್ವಯ

ಯಾರೇ ವ್ಯಕ್ತಿಯನ್ನು ಎಂದರೆ,

(ಎ) ಅವನಿಗೆ ಸಹಕಾರಿ ಸೇವೆಯು ಅಗತ್ಯವಾಗಿರುವಲ್ಲಿ, ಅವನು ಸದಸ್ಯರ ಹೊಣೆಗಾರಿಕೆಯನ್ನು ಅಂಗೀಕರಿಸಿದಲ್ಲಿ ಮತ್ತು ಕರಾರು ಅಧಿ ನಿಯಮ 1872ರ (1872ರ ಕೇಂದ್ರಾನಿಯಮ IX) ಅಡಿಯಲ್ಲಿ ಕರಾರು ಮಾಡಿಕೊಳ್ಳಲು ಸಕ್ಷಮನಾಗಿದಿದ್ದಲ್ಲಿ;

(ಬಿ) ಅವನು ಯಾವುದೇ ವ್ಯವಹಾರವನ್ನು ನಡೆಸುತ್ತಿದ್ದು, ಅಂಥ ವ್ಯವಹಾರವು ಸಹಕಾರಿಯ ಉಪ ವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ವ್ಯವಹಾರಗಳಿಗೆ ವಿರುದ್ಧವಾಗಿರದಿದ್ದಲ್ಲಿ ಅಥವಾ ಸ್ಪರ್ಧಾತ್ಮಕವಾಗಿರದಿದ್ದಲ್ಲಿ

(ಸಿ) ಅವನು ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿರುವ ಅಂತಃ ಇತರ ಷರತ್ತುಗಳನ್ನು ಪೂರೈಸಲು ಒಪ್ಪಿದಲ್ಲಿ ಅಂಥಹ ಸದಸ್ಯನ್ನು ಸಹಕಾರಿಯ ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು.

ಮೇಲಿನ ವ್ಯಾಖ್ಯಾನದಲ್ಲಿ ಕರಾರು ಮಾಡಿಕೊಳ್ಳಲು ಸಕ್ಷಮವಾಗಿರುವ ವ್ಯಕ್ತಿಗಳನ್ನು ಮಾತ್ರ ಸದಸ್ಯನ್ನಾಗಿ ಸೇರಿಸಿಕೊಳ್ಳಬಹುದೆಂದು ಹೇಳಲಾಗಿದೆ, ಭಾರತೀಯ ಕರಾರು ಅಧಿನಿಯಮ, 1872 ಕಲಂ 11ರನ್ವಯ ಈ ಕೆಳಗಿನ ವ್ಯಕ್ತಿಗಳು ಕರಾರು ಮಾಡಿಕೊಳ್ಳಲು ಅರ್ಹರಲ್ಲ/ಸಕ್ಷಮರಲ್ಲ;

1) 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳು
2) ಮಾನಸಿಕ ಅಸ್ವಸ್ಥ ವ್ಯಕ್ತಿಗಳು
3) ದಿವಾಳಿ ಹೊಂದಿದ ವ್ಯಕ್ತಿಯೆಂದು ಘೋಷಿತನಾದ ವ್ಯಕ್ತಿ
4) ಭಾರತದ ಯಾವುದೇ ಕಾನೂನಿನ ಮೂಲಕ ಕರಾರು ಮಾಡಿಕೊಳ್ಳಲು ಸಕ್ಷಮನಲ್ಲದ ವ್ಯಕ್ತಿಯೆಂದು ಘೋಷಿತನಾಗಿರುವ ವ್ಯಕ್ತಿ

ಮೇಲಿನ ವ್ಯಾಖ್ಯಾನದಲ್ಲಿ ಮಾನಸಿಕ ಅಸ್ವಸ್ಥ ಕರಾರು ಮಾಡಿಕೊಳ್ಳಲು ಅರ್ಹನಲ್ಲ ಎಂದು ಹೇಳಲಾಗಿದೆ. ಆದ್ದರಿಂದ ಅಂಥವರು ಸದಸ್ಯರಾಗಲು ಬರುವುದಿಲ್ಲ. ಆದರೆ ಯಾವುದೇ ವ್ಯಕ್ತಿಯನ್ನು ಮಾನಸಿಕ ಅಸ್ವಸ್ಥನೆಂದು ತೀರ್ಮಾನಿಸುವುದು ಹೇಗೆ? ಎಂಬ ಪ್ರಶ್ನೆಗೆ ಉತ್ತರವನ್ನು ಭಾರತೀಯ ಕರಾರು ಅಧಿನಿಯಮ, 1872 ಕಲಂ 12ರಲ್ಲಿ ಹೇಳಲಾಗಿದೆ. ಕರಾರಿಗೆ ಸಂಬಂಧಿಸಿದಂತೆ ಮಾನಸಿಕ ಅಸ್ವಸ್ಥನೆಂದು ಈ ಕೆಳಗಿನ ವ್ಯಕ್ತಿಗಳನ್ನು ಹೇಳಬಹುದಾಗಿರುತ್ತದೆ;

1. ಯಾವ ವ್ಯಕ್ತಿಗೆ ತಾನು ಕರಾರಿಗೆ ಸಹಿ ಹಾಕುವುದರಿಂದಾಗಿ ಎದುರಾಗಬಹುದಾದ ಪರಿಣಾಮಗಳ ಅರಿವು ಮತ್ತು ಕರಾರಿನ ಕುರಿತು ವಿವೇಚಿಸುವ ಶಕ್ತಿ ಇರುವುದಿಲ್ಲವೋ ಮತ್ತು ಸದರಿ ಕರಾರನ್ನು ಅರ್ಥಮಾಡಿಕೊಳ್ಳುವ ಮಾನಸಿಕ ಶಕ್ತಿ ಇರುವುದಿಲ್ಲವೋ ಅಂತಹ ವ್ಯಕ್ತಿಯನ್ನು ಮಾನಸಿಕ ಅಸ್ವಸ್ಥನೆಂದು ಹೇಳಲಾಗುತ್ತದೆ.
2. ಯಾವುದೇ ವ್ಯಕ್ತಿಯು ಕೆಲವೊಂದು ಸಂದರ್ಭದಲ್ಲಿ ಮಾನಸಿಕವಾಗಿ ಸ್ವಸ್ಥನಿದ್ದು, ಕೆಲವೊಂದು ಸಂದರ್ಭದಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿದ್ದರೆ ಅಂಥಹ ವ್ಯಕ್ತಿಯು ಮಾನಸಿಕವಾಗಿ ಸ್ವಸ್ಥನಾಗಿರುವ ಸಂದರ್ಭದಲ್ಲಿ ಮಾತ್ರ ಕರಾರು ಮಾಡಿಕೊಳ್ಳಬಹುದಾಗಿರುತ್ತದೆ.

ಸಹ ಸದಸ್ಯರ ಹಕ್ಕು ಬಾಧ್ಯತೆಗಳು;

ಕಾಯ್ದೆ ಕಲಂ 21ಎ(2)(3)(4)(5)ನಲ್ಲಿ ಸಹ ಸದಸ್ಯನ ಹಕ್ಕು ಭಾದ್ಯತೆ ಕುರಿತು ಹೇಳಲಾಗಿದೆ :

1. ಕಾಯ್ದೆ ಕಲಂ 21ಎ(3) ಸಹ ಸದಸ್ಯನು ಷೇರುಗಳನ್ನು ಹೊಂದಿರಬಹುದು ಆದರೆ, ಸಹಕಾರಿಯ ಒಬ್ಬ ಪದಾಧಿಕಾರಿಯಾಗಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.
2. ಕಾಯ್ದೆ ಕಲಂ 21ಎ(4) ಸಹ ಸದಸ್ಯನು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಭಾಗವಹಿಸಲು ಮತ್ತು ಸಹಕಾರಿಯ ಮಂಡಳಿಗೆ ನಡೆಯುವ ಚುನಾವಣೆಯೂ ಸೇರಿದಂತೆ ಸಹಕಾರಿಯ ಯಾವುದೇ ಸಭೆಯಲ್ಲಿ ಮತ ಚಲಾಯಿಸಲು ಹಕ್ಕು ಹೊಂದಿರತಕ್ಕದ್ದಲ್ಲ.
3. ಕಾಯ್ದೆ ಕಲಂ 21ಎ(5) ಈ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಸಹ ಸದಸ್ಯನು, ಸಹಕಾರಿಯ ಉಪ–ವಿಧಿಗಳಲ್ಲಿ ನಿರ್ದಿಷ್ಟಪಡಿಸ ಬಹುದಾದಂಥ ಒಬ್ಬ ಸದಸ್ಯನು ಹೊಂದಿರುವ ವಿಶೇಷಾಧಿಕಾರಗಳನ್ನೂ ಮತ್ತು ಹಕ್ಕುಗಳನ್ನೂ ಹೊಂದಿರತಕ್ಕದ್ದು ಮತ್ತು ಸದಸ್ಯನ ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕದ್ದು.

**Sri S.S.Shinde, Chartered Accountant, Bijapur**

**Question NO : 1) Eligible Member**

**i) Is there any prescribed business or activities, transactions are needed by a member to be called as eligible member**

**ii) If yes what are the details**

**iii) If no then what is difference between member and eligible member.**

**Answer :**

i) Yes, prescribed minimum business or activities, transactions are needed by a member to be called as eligible member as per Sec.20 (2). The minimum business criteria should be prescribed in their respective byelaw.

ii) The below mentioned rudiments are essential to decide whether member is eligible or not.

No person shall be eligible to continue as a member if such person :

(a) Has not used the services of the co-operative for two consecutive years to the minimum level specified in the bye-laws; (or)

(b) Has not attended three consecutive general meetings of the co-operative and such absence has not received the consent of the general body; (or)

(c) Is in default regarding any payment to be made to the co-operative exceeding an amount and for a period specified in the bye-laws.

iii) The eligible members are:

a. Entitle to participate in Annual General body meeting

b. Entitle to cast his valuable vote

c. Entitle to continue as member.

d. Entitle to get use of service of cooperative.

The ineligible members are not entitled to get aforesaid facility.

ಮುಂದಿನ ಸಂಚಿಕೆಗೆ....

# ಸಾಗರದ ಸುವಿಧಾ ಸೌಹಾರ್ದ ಸಹಕಾರಿಯಲ್ಲಿ ಸೂಪರ್ ಮಾರ್ಕೆಟ್ ಆರಂಭ







ಪ್ರಸ್ತುತ ಜನರ ನಿರೀಕ್ಷೆಗೆ ತಕ್ಕಂತಹ ಗುಣಮಟ್ಟದ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿನ ಗರಿಷ್ಠ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವ ಬೃಹತ್ ಸಹಕಾರಿ ಸಂಸ್ಥೆ ಆರಂಭವಾಗಿರುವುದು ಸಾಗರ ಜನತೆಯ ಸೌಭಾಗ್ಯವಾಗಿದೆ ಎಂದು ಶಾಸಕ ಶ್ರೀ ಗೋಪಾಲಕೃಷ್ಣ ಬೇಳೂರು ಸಂತಸ ವ್ಯಕ್ತಪಡಿಸಿದರು.

ದ್ವಾರಕನಾಥ ಕಲಾಮಂದಿರದಲ್ಲಿ ಸುವಿಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಸೂಪರ್ ಮಾರ್ಕೆಟ್ ಮಳಿಗೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹಾನಗರಗಳಲ್ಲಿ ಭಾರತೀಯ ಚಿಲ್ಲರೆ ಮಾರುಕಟ್ಟೆಯಲ್ಲಿ ದೃಷ್ಟಿಯಲ್ಲಿಟ್ಟುಕೊಂಡು ಮಲ್ಟಿ ನ್ಯಾಷನಲ್ ಕಂಪನಿಗಳು ದೊಡ್ಡ ಮೊತ್ತದ ಬಂಡವಾಳ ಹೂಡಿ ಸೂಪರ್ ಮಾರ್ಕೆಟ್‌ಗಳನ್ನು ತೆರೆಯುವ ಮೂಲಕ ಜನರ ಆಕರ್ಷಣೆಗಳಿಸುತ್ತಿವೆ. ಆದರೆ ಸ್ಥಳೀಯ ಸಂಪನ್ಮೂಲ ಹಾಗೂ ವ್ಯಕ್ತಿಗಳ ಸಮಯೋಚಿತ ಚಿಂತನೆಯಿಂದ ಸಹಕಾರಿ ವ್ಯವಸ್ಥೆಯಲ್ಲಿ ಸಾರ್ವಜನಿಕರ ಅಗತ್ಯ ಸೇವೆಗೆ ಉತ್ತಮ ಸಂಸ್ಥೆ ಆರಂಭಿಸಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ ಎಂದರು.

ಸುವಿಧಾ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸುಭಾಷ್ ಹೆಗಡೆ ಮಾತನಾಡಿ ಮಲೆನಾಡಿನ ಜನತೆಗೆ ಪೂರಕ ಅಗತ್ಯವಿರುವ ವಸ್ತುಗಳನ್ನು ಉತ್ಪನ್ನಗಳನ್ನು ಮಾರಾಟ ಮಾಡುವ ಜೊತೆಗೆ 5 ವರ್ಷದಲ್ಲಿ ತಾಲ್ಲೂಕಿನ 50 ವಿವಿಧ ಸ್ಥಳಗಳಲ್ಲಿ ಸುವಿಧಾ ಮಳಿಗೆಗಳನ್ನು ತೆರೆಯುವ ಯೋಜನೆಯಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಶ್ರೀ ರಾಧಾಕೃಷ್ಣ ನಾಯಕ್ ಬೇಂಗ್ರೆ ಸುವಿಧಾ ಫುಡ್‌ಕೋರ್ಟ್ ಉದ್ಘಾಟಿಸಿದರು. ಶ್ರೀ ಮೈಥಿಲಿ ಪ್ರಾರ್ಥಿಸಿ, ಶ್ರೀ ಬಿ.ವಿ.ರವೀಂದ್ರನಾಥ್ ಸ್ವಾಗತಿಸಿದರು. ಶ್ರೀ ಜಿ.ಆರ್.ಪಂಡಿತ್ ಕಾರ್ಯಕ್ರಮವನ್ನು ನಿರ್ವಹಿಸಿ, ಸುವಿಧಾ ಸಲಹೆಗಾರ ಶ್ರೀ ರಾಮಸ್ವಾಮಿ ಕಳಸವಳ್ಳಿ ವಂದಿಸಿದರು.

### ಲಾಭಗಳಲ್ಲಿ ಸೇವೆಯೂ ಒಂದು ಲಾಭವೇ – ಶ್ರೀ ಎಸ್. ಕೆ. ಆನಂದ್‌ಕುಮಾರ್

ಸುವಿಧಾ ವೆಬ್‌ಸೈಟ್‌ಅನ್ನು ಉದ್ಘಾಟಿಸಿದ ಪುತ್ತೂರಿನ ಖ್ಯಾತ ಉದ್ಯಮಿ ಹಾಗೂ ಸ್ನೇಹ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಕೆ.ಆನಂದ್‌ಕುಮಾರ್ ವೇದಿಕೆಯಲ್ಲಿ ಮಾತನಾಡಿ, ಸಹಕಾರಿ ಸಂಸ್ಥೆ ಸುವಿಧಾ ಸೂಪರ್ ಮಾರ್ಕೆಟ್ ಕೇವಲ ಆರ್ಥಿಕ ಲಾಭದ ಸಂಸ್ಥೆಯಲ್ಲ ಲಾಭಗಳಲ್ಲಿ ಸೇವೆಯೂ ಒಂದು ಲಾಭವೇ, ಗುಣಮಟ್ಟದ ಉತ್ಪನ್ನಗಳನ್ನು ಜನರಿಗೆ ವಿತರಿಸುವುದರಿಂದ ಮಾನಸಿಕ ತೃಪ್ತಿಯಿಂದ ಸಿಗುವ ಲಾಭವಾಗಿದೆ ಎಂದರು.

## ಖರೀದಿಸಿದ ವಸ್ತುಗಳಲ್ಲಿ ದೋಷ ಕಂಡುಬಂದರೆ ಹಿಂತಿರುಗಿಸಲು ಅವಕಾಶ – ಬಿ.ವಿ.ರವೀಂದ್ರನಾಥ್

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಬಿ.ವಿ.ರವೀಂದ್ರನಾಥ್ ಗ್ರಾಹಕರಿಗೆ ಖರೀದಿಯ ಖುಷಿಯನ್ನು ಸೃಷ್ಟಿಸುವ ವ್ಯವಸ್ಥೆಗಾಗಿ ಸುವಿಧಾ ಸೂಪರ್ ಮಾರ್ಕೆಟ್ ಆರಂಭಿಸಲಾಗಿದೆ. ಜನಸಾಮಾನ್ಯರಿಗೆ ದೈನಂದಿನ ಬದುಕಿನಲ್ಲಿ ಅಗತ್ಯವಿರುವ ಎಲ್ಲ ವಸ್ತುಗಳೂ ಒಂದೇ ಸೂರಿನಡಿಯಲ್ಲಿ ಉತ್ತಮ ಗುಣಮಟ್ಟ ಮತ್ತು ಸರಿಯಾದ ತೂಕದ ಭರವಸೆಯೊಂದಿಗೆ ಉತ್ಪಾದಕರಿಂದ ನೇರವಾಗಿ ಗ್ರಾಹಕರಿಗೆ ದೊರೆಯುವಂತೆ ಮಾಡಲು ಪ್ರಾರಂಭಿಸಿದ ಸೇವಾ ಉದ್ದಿಮೆ. ಇಡೀ ಯೋಜನೆಯು ನಾವು ನಮ್ಮಿಂದಲೇ ನಮಗಾಗಿ ನಡೆಸುವಂತಹ ವ್ಯವಸ್ಥೆಯಾಗಿದೆ. ಅಂದರೆ ಇದರಲ್ಲಿ ಮಾಲೀಕರು, ಆಡಳಿತ ನಡೆಸುವವರು ಮತ್ತು ಫಲಾನುಭವಿಗಳು ನಾವೇ ಆಗಿದ್ದೇವೆ. ಗ್ರಾಹಕ ಸ್ನೇಹಿಯಾಗಿ ಮಾರುಕಟ್ಟೆಯನ್ನು ಗ್ರಾಹಕರ ನಿರೀಕ್ಷೆಗೆ ಅಣಿಗೊಳಿಸಲಾಗಿದೆ ಎಂದರು. ನಮ್ಮ ಮಾರುಕಟ್ಟೆಯಲ್ಲಿ ಖರೀದಿಸಿದ ವಸ್ತುಗಳಲ್ಲಿ ದೋಷ ಕಂಡುಬಂದರೆ ಹಿಂತಿರುಗಿಸಲು ಅವಕಾಶವಿದೆ ಎಂದು ನಾಮಫಲಕ ಹಾಕಲಾಗಿದೆ. ಗುಣಮಟ್ಟದ ಸಾಮಗ್ರಿ ಖಾತ್ರಿ ತೂಕದಲ್ಲಿ ಗ್ರಾಹಕರಿಗೆ ವಿತರಿಸುವ ಯೋಜನೆ ನಮ್ಮದು ಎಂದರು.

## ರಾಜ್ಯದಲ್ಲಿಯೇ ಮೊದಲ ಪ್ರಯೋಗ - ಶ್ರೀ ಎಸ್. ಆರ್. ಸತೀಶ್ಚಂದ್ರ



ಸುವಿಧಾ ಚಿಣ್ಣರ ಲೋಕ ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ ಮಾತನಾಡಿ, ಭಾರತೀಯ ಆರ್ಥಿಕ, ಸಾಮಾಜಿಕ ಸ್ವಾಸ್ಥ್ಯಕ್ಕೆ ಸಹಕಾರಿ ವ್ಯವಸ್ಥೆಯೇ ಪ್ರಮುಖ ಕಾರಣವಾಗಿದೆ ಎಂದರು.

ಪ್ರಪಂಚದಲ್ಲಿ ಆರ್ಥಿಕ ದಿವಾಳಿತನ ಆರಂಭವಾಗಿದ್ದರೆ ಭಾರತ ಮಾತ್ರ ಆರ್ಥಿಕವಾಗಿ ಸದೃಢಗೊಳ್ಳುತ್ತಿದೆ. ಸಹಕಾರಿ ವ್ಯವಸ್ಥೆಯ ಪರಿಣಾಮಕಾರಿ ವಹಿವಾಟಿನಿಂದ ಇದು ಈ ವಾತಾವರಣ ನಿರ್ಮಾಣವಾಗಿದೆ. ಅಮೇರಿಕಾದಲ್ಲಿ 200ಕ್ಕೂ ಹೆಚ್ಚು ಹಣಕಾಸು ಸಂಸ್ಥೆಗಳು ಆರ್ಥಿಕ ವಹಿವಾಟಿನ ಸಂಕಷ್ಟಕ್ಕೆ ಸಿಲುಕಿ ಮುಚ್ಚಲ್ಪಟ್ಟವು. ಆದರೆ ಭಾರತದ ಕರ್ನಾಟಕ ರಾಜ್ಯ ಒಂದರಲ್ಲೇ ಇದೇ ಸಮಯದಲ್ಲಿ 200ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ಉದ್ಘಾಟನೆಗೊಂಡಿವೆ. ಆರ್ಥಿಕ ಕ್ಷೇತ್ರದ ದಿಗ್ಗಜರಾದ ಕೆನರಾ ಬ್ಯಾಂಕ್ ತನ್ನ 106ನೇ ವರ್ಷಾಚರಣೆಗೆ ದೇಶದಾದ್ಯಂತ 106 ನೂತನ ಶಾಖೆಗಳನ್ನು ತೆರೆಯುವ ಮೂಲಕ ಸಂಭ್ರಮವನ್ನು ಆಚರಿಸಿದೆ ಎಂದು ಮಾಹಿತಿ ನೀಡಿದರು. ಸಾಗರದಲ್ಲಿ ಸಮಾನ ಮನಸ್ಕ ಸಹಕಾರಿಗಳು ಸೇರಿ ಯೋಜಿಸಿರುವ ಬೃಹತ್ ಯೋಜನೆಯ ಫಲವಾಗಿ 1000 ಸದಸ್ಯರುಗಳಿಂದ ಷೇರು ಹಣವಾಗಿ ಸಂಗ್ರಹಿಸಿದ 1.50 ಕೋಟಿ ರೂ.ಗಳ ಸ್ವಂತ ಬಂಡವಾಳದಲ್ಲಿ ಸೌಹಾರ್ದ ಸಹಕಾರಿ ವ್ಯವಸ್ಥೆಯಲ್ಲಿ ಆರಂಭಿಸಿರುವ ಸೂಪರ್ ಮಾರ್ಕೆಟ್ ರಾಜ್ಯದಲ್ಲಿಯೇ ಮೊದಲ ಪ್ರಯೋಗ ಎಂದು ಪ್ರಶಂಸಿಸಿದರು.

# ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸಂಭ್ರಮದ




ಧುಪದಾಳದ ಅರಿಹಂತ ಸೌಹಾರ್ದ






ಕಾವೇರಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ನೇರ್ಲಿ



ಶ್ರೀ ಕನ್ಯಕಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ



ದಿ ಪಾವಗಡ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ತುಮಕೂರು.



ಶ್ರೀ ಬಾಲಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗಣಪತಿ ಚೌಕ ವಿಜಾಪುರ



ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ, ಬಳ್ಳಾರಿ



ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಾರಟಗಿ ಕೊಪ್ಪಳ.




ಶ್ರೀರಾಮ ಸೌಹಾರ್ದ ಪತ್ತಿನ ಸಹಕಾರಿ ನಿ., (ಕಲ್ಲಟ್ಟಿ) ತೇರದಾಳ



ಮಿಲ್ಲತ್ ಕ್ರೆಡಿಟ್ ಸೌಹಾರ್ದ ಸಹ

# “ಸೌಹಾರ್ದ ಸಹಕಾರಿ ದಿನಾಚರಣೆ”






ಶ್ರೀ ಚನ್ನಬಸವೇಶ್ವರ ಸ್ವಾಮಿ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು.



ಉನ್ನತಿ ಸೌಹಾರ್ದ ಸಹಕಾರಿ ನಿ., ವಿಜಾಪುರ.




ಅಮೃತ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,ಅಮೃತ, ಶಿವಮೊಗ್ಗ.



ಅರಿಹಂತ ಅರ್ಬನ್ ಸೌಹಾರ್ದ ಸಹಕಾರಿಲಿ., ಹುಲ್ಲೋಳಿ, ಬೆಳಗಾವಿ.




ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು.




ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ., ಮೈಸೂರು



ಕಾರಿ ನಿ., ಧಾರವಾಡ



ದೈವಜ್ಞ ಪತ್ತಿನ ಸೌಹಾರ್ದ ಸಹಕಾರಿ ನಿ., ಧಾರವಾಡ



ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಪತ್ತಿನ ನಿ., ಬಾದಾಮಿ, ಬಾಗಲಕೋಟೆ